ಸಂನದ

ತಿಂಗಳ ಪತ್ರಿಕೆ ಡಿಸೆಂಬರ್ ೧೯೮೪



ಮಾನಸ

ಸಂಪುಟ : ೨ ಸಂಚಿಕೆ ೧೦
ಡಿಸೆಂಬರ್ ೧೯೯೦

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ.)
ಬೆಂಗಳೂರು—560-067.

ಬಿಡಿಪ್ರತಿ: 2 ರೂ.

ಸೂಚನೆ: ವಾರ್ಷಿಕ ಚಂದಾ :20ರೂ.
ಆಜೀವ ಚಂದಾ :250ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ.....................

ಸಂಪಾದಕೀಯ




ಸಾಮಾನ್ಯವಾಗಿ ಎಲ್ಲ ಗಲಭೆಗಳು, ದೊಂಬಿಗಳು, ಪ್ರಕೃತಿ ವಿಕೋಪ ಇತ್ಯಾದಿಗಳು ನಡೆದರೆ ಪ್ರಥಮ ಬಲಿ ಮಹಿಳೆ. ತಮ್ಮ ರಾಜಕೀಯ ಅಭಿವ್ಯಕ್ತಿಗಾಗಿಯೂ ಬೆಲೆ ತೆತ್ತಬೇಕಾದ ಪ್ರಸಂಗ ಬಂದಿರುವುದು ನಮ್ಮ ಸ್ವತಂತ್ರ ಭಾರತದಲ್ಲಿ ಪ್ರಜೆಗಳಿಗೆ ಜೀವಿಸುವ ಹಕ್ಕೂ ಇದೆಯೆ? ಇಲ್ಲವೆ? ಎಂದು ಯೋಚಿಸಬೇಕಾದಂಥ ಶೋಚನೀಯ ಪರಿಸ್ಥಿತಿ ನಮ್ಮ ಮುಂದಿದೆ. ಈಚೆಗೆ ಆಂಧ್ರ ಪ್ರದೇಶದ ನಲ್ಗೊಂಡ್ ಜಿಲ್ಲೆಯ ಬಡಾಯ್‌ಗಡ್ಡ ತಾಂಡಾದ ಆದಿವಾಸಿಗಳು ಹಲ್ಲೆಗೊಳಗಾದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ೩ ಜನ ಎಳೆಯ ತರುಣಿಯರನ್ನು ಹಿಂಸಿಸಿದ ರೀತಿ, ಅವರ ಮೇಲೆ ಎಸಗಿದ ದೌರ್ಜನ್ಯಗಳನ್ನು ನೋಡಿದರೆ ಮನುಷ್ಯತ್ವ ಕ್ರಮೇಣ ನಾಶವಾಗುತ್ತಿದೆ, ಪಾಶವೀ ಶಕ್ತಿಗಳ ಉದ್ಧಾರವಾಗುತ್ತಿದೆ ಎನಿಸದಿರಲಾರದು. ತರುಣಿಯರ ಮೇಲಿನ ಅತ್ಯಾಚಾರ, ಎಲ್ಲರೆದುರೇ ಮತ್ತೊಂದು ತಾಂಡಾದ ಆದಿವಾಸಿಗಳಿಂದಲೇ ಆಗಿದೆ. ಇದಕ್ಕೆ ಕಾರಣ ವಿಭಿನ್ನ ರಾಜಕೀಯ ನಂಬಿಕೆ. ದೌರ್ಜನ್ಯಕ್ಕೊಳಗಾದ ತಾಂಡಾದ ಜನರು ತೆಲುಗುದೇಶಂ ಹಾಗೂ ಸಿ.ಪಿ.ಎಂ. ಪಕ್ಷದ ಬೆಂಬಲಿಗರು, ಅಪರಾಧಿಗಳು ಕಾಂಗ್ರೈನ ಬೆಂಬಲಿಗರು-ಈಗ ಅಲ್ಲಿನ ಆಡಳಿತ ಪಕ್ಷ. ಒಡೆದು ಆಳುವ ನೀತಿಯನ್ನು ಮೂಲೋದ್ದೇಶವನ್ನಾಗಿಟ್ಟುಕೊಂಡಿರುವ ನಮ್ಮ ರಾಜಕೀಯ ಪಕ್ಷಗಳು ಎಲ್ಲೆಡೆಯೂ ಇದೇ ನೀತಿ ಅನುಸರಿಸಿ ದೊಂಬಿಗಳನ್ನು ಹುಟ್ಟು ಹಾಕುವಂತೆ, ಈ ಆದಿವಾಸಿಯರ ಮಧ್ಯೆ "ನಾಗರೀಕ" ರನ್ನಾಗಿಸುವ ಭರದಲ್ಲಿ ಕಿಚ್ಚು ಹೊತ್ತಿಸುವ ಯತ್ನದಲ್ಲಿ ಯಶಸ್ವಿಯಾಗಿವೆ. ಆಡಳಿತ ಪಕ್ಷಕ್ಕೆ ಪರೋಕ್ಷವಾಗಿ ಸಂಬಂಧಿಸಿದ ಈ ಘಟನೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಯುವುದೇ ಸಂಶಯ.

ಮುಂದುವರೆದ, ವಿದ್ಯಾವಂತ ಮಹಿಳೆಯರು ಈಗೀಗ ಜಾಗೃತರಾಗಿದ್ದರೂ ಅವರ ಮೇಲಿನ ದೌರ್ಜನ್ಯವೇ ನಿಂತಿಲ್ಲ, ಅಂತಹುದರಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ತೀರ ಹಿಂದುಳಿದವರೆನಿಸಿಕೊಂಡಿರುವ ಬಡಪಾಯಿ ಆದಿವಾಸಿ ಸ್ತ್ರೀಯರ ಗತಿಯೇನು? ಈ ಕಾರಣದಿಂದಲೇ ಈಚೀಚೆಗೆ ಅವರ ಮೇಲಿನ ಶೋಷಣೆ, ಹಿಂಸಾಚಾರಗಳೂ ಹೆಚ್ಚುತ್ತಿವೆಯೆಂಬುದು ನೋವಿನ ಸಂಗತಿ. ಬಿಹಾರದಲ್ಲಿ ಆದಿವಾಸಿ ತರುಣಿಯ ಮೇಲಿನ ದೌರ್ಜನ್ಯದ ನನಪೂ ಮಾಸದಿರುವಾಗಲೇ ಮತ್ತೊಂದು ನೀಚಕಾರ್ಯ.

ನ್ಯಾಯಕ್ಕಾಗಿ ನ್ಯಾಯಾಲಯಗಳಿಗೆ ಹೋದರೂ, ಪಟ್ಟಭದ್ರಹಿತಾಸಕ್ತಿಗಳು ರಾಜಕೀಯ ಮತ್ತು ಅಧಿಕಾರಗಳ ಬೆಂಬಲದಿಂದ ನ್ಯಾಯವನ್ನು ಕೊಂಡುಕೊಂಡು ನೊಂದ ಮಹಿಳೆ, "ಅದೇ ಕಸುಬಿನವಳೆಂದೋ, ಹಣಕ್ಕಾಗಿ ಬಂದವಳೆಂದೋ" ಸಾಧಿಸಿ ಗಾಯದ ಮೇಲೆ ಉಪ್ಪನ್ನು ಸವರುವ ಮಹತ್ಕಾರ್ಯ ಸಾಧಿಸುತ್ತಾರೆನ್ನುವುದು ಈಚಿನ ನಿದರ್ಶನಗಳಿಂದ ಸ್ಪಷ್ಟ. ನ್ಯಾಯಕ್ಕಾಗಿ ಕೋರ್ಟುಗಳನ್ನು ಕಾಯದೆ, ಪೊಳ್ಳು ಕಾನೂನಿಗೂ ಶರಣು ಹೋಗದೆ, ಮಹಿಳಾ ಸಂಘಟನೆಗಳೂ, ಮಾನವೀಯ ಪ್ರಜ್ಞೆಯುಳ್ಳ ಪ್ರತಿ ಪ್ರಜೆಯೂ, ಇಂಥ ಶೋಷಣೆಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕಾದ ಕಾಲ ಸನ್ನಿಹಿತವಾಗಿದೆ.

ಅನಂತಮೂರ್ತಿಯವರ

ಸಾಹಿತ್ಯದ ಸ್ತ್ರೀಯು ಪ್ರಪಂಚ



ವಾಸ್ತವಿಕ ಜೀವನದ ಹಾಗೂ ಲೇಖಕನ ಭಾವ ಪ್ರಪಂಚದ ಸಮಗ್ರತೆಗಳ ಸಂಕೀರ್ಣ ಸ್ವರೂಪವನ್ನು ಸಾಹಿತ್ಯಕ ಪ್ರಭುದ್ಧ ಭಾಷೆಯಲ್ಲಿ, ಕಲಾತ್ಮಕತೆಯಲ್ಲಿ, ತಂತ್ರದಲ್ಲಿ ಹಾಗೂ ಒಟ್ಟು ಬಂಧದಲ್ಲಿ ಹಿಡಿದಿಡುವ ಶ್ರೀ ಅನಂತಮೂರ್ತಿಯವರ ಸಾಹಿತ್ಯದಿಂದ ಸ್ತ್ರೀ ಪಾತ್ರಗಳನ್ನು ಪ್ರತ್ಯೇಕಿಸಿ, ಸಾಹಿತ್ಯದ ಪರಧಿಯಿಂದೀಚೆ ಪರಿಶೋಧಿಸುವುದು ಸಾಹಿತ್ಯಕೃತಿಗೆ ಹಾಗೂ ಸಾಹಿತ್ಯ ಕೃತಿ ನೀಡುವ ಸಮಗ್ರ ಜೀವನ ದೃಷ್ಟಿಗೆ ಧಕ್ಕೆ ನಿಜ. ಆದಾಗ್ಯೂ, ಅನಂತಮೂರ್ತಿಯವರ ಸಾಹಿತ್ಯದ ಮುಖ್ಯ ಅಂಶವಾದ ಗಂಡು – ಹೆಣ್ಣಿನ ಸಂಬಂಧ– ಸೂಕ್ಷ್ಮ ಸಂವೇದಿತ ಸ್ತ್ರೀಯರಿಗೆ ಸೂಕ್ಷ್ಮ ಪ್ರಶ್ನೆಗಳನ್ನೆತ್ತುವುದರಿಂದ ಈ ರೀತಿಯ ಶೋಧನೆ ಅಗತ್ಯ ಎಂಬುದು ನನ್ನ ನಿಲುವು.

ಆಧುನಿಕ ಸಾಹಿತ್ಯದ ಮುಖ್ಯ ಗುಣವೆಂದು ಶ್ರೀ ಅಡಿಗರು ಗುರುತಿಸುವ ಅಂತರ್ಮುಖತ್ವ ಅನಂತಮೂರ್ತಿಯವರ ಸಾಹಿತ್ಯದ ಗಂಡು-ಹೆಣ್ಣಿನ ಸಂಬಂಧದ ಸಂದರ್ಭದಲ್ಲಿ ಬಿಚ್ಚಿಕೊಳ್ಳುವುದು: ಗಂಡಿನ ಕೇಂದ್ರ ಪ್ರಜ್ಞೆಯಲ್ಲಾದರೂ, ಇದಕ್ಕೆ ವಿರೋಧವಾಗಿ, ಪೂರಕವಾಗಿ ನಿಲ್ಲುತ್ತಾ ಹೋಗುವುದು ಹೆಣ್ಣು ಪ್ರಜ್ಞೆ. ಈ ಎರಡು ಪ್ರಜ್ಞೆಗಳ ಘರ್ಷಣೆಯಲ್ಲಿ, ಸಾಂಗತ್ಯದಲ್ಲಿ, ಆತ್ಮಪ್ರಜ್ಞೆಯು ಪದರುಗಳನ್ನು ಕೆದಕಿ-ಬೆದಕಿ ನೋಡುವ ಹಾಗೂ ಅಲ್ಲಿ ಮೂಡಿರುವ ಭಾವಪ್ರಪಂಚವನ್ನು ಅರಗಿಸಿಕೊಳ್ಳುವ ಪ್ರಯತ್ನದಲ್ಲಿ: ಕೇಂದ್ರ ಪ್ರಜ್ಞೆಯು ಸ್ವೈಚಾರಿಕತೆಯ ಕಡೆಗೆ ಒತ್ತು ಇದ್ದು, ಹೆಣ್ಣು ಪ್ರಜ್ಞೆ ಪೋಷಕ ಪ್ರಜ್ಞೆಯಾಗಿ ಹಾಗೂ ಸಾಂಕೇತಿಕ ಅರ್ಥದಲ್ಲಿ ಮಾತ್ರ ಧ್ವನಿಸುತ್ತದೆ. ಹಾಗಾಗಿ ಇವರ ಸಾಹಿತ್ಯದಲ್ಲಿ ಬರುವ ಸ್ತ್ರೀಯರು ಕೆಳಗಿನ ಕೆಲವು ನಿರ್ದಿಷ್ಟ ಧೋರಣೆಗಳನ್ನು ಪ್ರತಿನಿಧಿಸುವ ನಿರ್ದಿಷ್ಟ ಪರಿಸರದ ಕೂಸುಗಳು ಮಾತ್ರ.

೧) ಮನಸ್ಸಿನ ಭಾವನೆಗಳಿಗೆ, ಲೈಂಗಿಕ ಆಸೆಗಳಿಗೆ ಅಭಿವ್ಯಕ್ತಿ ಕೊಡದೇ, ಭಯದಲ್ಲಿ, ಸಂಕೋಚದಲ್ಲಿ ಮುಖವಾಡ ಧರಿಸಿ, ಇದ್ದದ್ದು ಒಪ್ಪಿ, ಒಪ್ಪಂದ ಬಯಸುವ ಮೇಲ್ಜಾತಿಯ ಮಧ್ಯಮ ವರ್ಗದ ಹೆಂಗಸರು. ಹೀಗೆ ಬದುಕುವುದು ಅಸಾಧ್ಯವಾದಾಗ ಆತ್ಮಹತ್ಯೆಯ ದುರಂತಕ್ಕೀಡಾಗುವವರು.

೨) ವಿರೋಧಿಸಿ ಕ್ರಿಯೆಗೆ ಇಳಿಯದೇ ಕಾಮದಲ್ಲಿ ಮಾತ್ರ ವ್ಯವಸ್ಥೆಯ ನೀತಿ ಅನೀತಿ ಮೀರುವ ವಿಧವಾ ಹಾಗೂ ಇತರ ಸ್ತ್ರೀಯರು. ಕಾಮವನ್ನು ಮೌಲ್ಯವನ್ನಾಗಿ ಎತ್ತಿ ಹಿಡಿದು ವಿರೋಧಿಸುವವರು ಇವರಲ್ಲ. ಗುಪ್ತವಾಗಿರುವ ಸಂಬಂಧ ಬಯಲಾದಾಗ ಅಸಹಾಯಕರಾಗಿ ಆತ್ಮಹತ್ಯೆ ಮುಂತಾದ ದುರಂತಕ್ಕೀಡಾಗುವವರು.

೩) ಸಣ್ಣ–ಪುಟ್ಟ ರಗಳೆಗಳಲ್ಲಿ 'ವಟ ವಟ ಎನ್ನುತ್ತಾ ಪಿರಿ ಪಿರಿ ಮಾಡಿ ಬದುಕುವ, ತಮ್ಮ ಬದುಕನ್ನು ಜಬ್ಬರ ಮೇಲೊಬ್ಬರು ಹೇರಲು ಬಯಸುವ, ಮನೆಗೆಲಸ, ಬಂಗಾರ, ಆಸ್ತಿ-ಪಾಸ್ತಿಯ ಪ್ರಪಂಚಕ್ಕೆ ಅಂಟಿಕೊಂಡ ಅತ್ತೆ, ಸೊಸೆ, ನಾದಿನಿ, ಹೆಂಡಂದಿರು.

೪) ಬತ್ತಿಸಿದ ಕಾಮದಲ್ಲಿ, ಕಳೆದುಕೊಂಡ ಆಸ್ತಿ—ಪಾಸ್ತಿಯಲ್ಲಿ, ಒಂಟಿಯಾಗಿ ಉಳಿದು ಮನುಷ್ಯರ ಬಗ್ಗೆ ಉತ್ಪ್ರೇಕ್ಷೆ ಎನ್ನಿಸುವ ಪ್ರೀತಿ—ದ್ವೇಷ ವ್ಯಕ್ತಪಡಿಸುವ ಮುದುಕಿಯರು,

೫) ಮಾನವೀಯ ಅಂಶಗಳುಳ್ಳ ಸೂಳೆಯರು.

೬) ತಮ್ಮ ಜೊತೆಗಿನ ಬಾಳುಬಿಟ್ಟು ಉಳಿದೆಲ್ಲ ಅಸಂಗತ, ನಿಷ್ಪ್ರಯೋಜಕ ಎಂಬ ಸರಳ ಮನಸ್ಸಿನ, ಭ್ರಾಂತವಿರದ, ಅತಿಪ್ರಜ್ಞೆಯಿರದ, ನಾಗರೀಕತೆಯ ಸೋಂಕಿರುವ ಹೆಂಗಸರು.

೭) ಸಣ್ಣ—ಪುಟ್ಟ ರಗಳೆ, ಜಂಜಡಗಳಲ್ಲೂ, ಬದುಕುವ ಛಲಕ್ಕೆ ತಮ್ಮ ಸೀಮಿತ ಪ್ರಪಂಚಲ್ಲೇ ಒಳದಾರಿ ಕಂಡುಕೊಂಡು ತಮ್ಮನ್ನು ಸಮರ್ಥಿಸಿಕೊಳ್ಳುವ ಸ್ತ್ರೀಯರು,

೮) ಈ ಮೇಲ್ಕಂಡ ಮೇಲ್ಜಾತಿಯ ಹೆಂಗಸರ ಪ್ರಪಂಚಕ್ಕೆ ವಿರುದ್ಧವಾಗಿ ಬರುವ ಶೂದ್ರ ಹೆಂಗಸರು. ಅತಿಪ್ರಜ್ಞೆ ಕಾಡದವರು: ಕಾಮಕ್ಕೆ ಮುಚ್ಚುಮರೆಯಿಲ್ಲದೇ ತೆರೆದುಕೊಳ್ಳುವವರು. ಪರಂಪರಾಗತ

ಮೌಲ್ಯಗಳಿಗೆ ಲೈಂಗಿಕ ವಿಚಾರದಲ್ಲಿ ಪ್ರಶ್ನೆಯಾಗುವವರು. ಆದರೆ ಸ್ವಪ್ರಜ್ಞೆಯಿಂದಲ್ಲ. ತಮ್ಮ ಬದುಕಿನಿಂದ ಮಾತ್ರ. (ಜೀವನದ ಭಿನ್ನ ಆಸಕ್ತಿಗಳಿಗೆ, ಕ್ರಾಂತಿಕಾರಕ ವಿಚಾರಗಳಿಗೆ ತೆರೆದುಕೊಂಡ ವಿದೇಶೀ ಸ್ತ್ರೀಯರು

ಗಳು) ಈ ಮೇಲ್ಕಂಡ ಸೂತ್ರಗಳಿಗೆ ಅಪವಾದವಾಗಿ ಬರುವ "ಅವಸ್ಥೆ"ಯ ಉಮಾ, ಲೂಸಿನಾ ಹಾಗೂ ಗೌರಿದೇಶಪಾಂಡೆ.

ಅನಂತಮೂರ್ತಿಯವರ ಪ್ರಥಮ ಕಥಾಸಂಕಲನ— "ಎಂದೆಂದೂ ಮುಗಿಯದ ಕಥೆ" ಇವರ ಬರಹದ, ಸತ್ಯಶೋಧನೆಯ, ಬದುಕ ಅರ್ಥೈಸುವ ಧೋರಣೆ ಇನ್ನೂ ಸ್ಪಷ್ಟವಾಗಿ ಮೂಡಿಬರುವ ಹಂತದಲ್ಲಿರುವುದರಿಂದಲೋ ಏನೋ ಇಲ್ಲಿನ ಹಲವು ಕಥೆಗಳು ಮೇಲಿನ ಸೂತ್ರಗಳಿಗೆ ಅಪವಾದಗಳಾಗಿವೆ.

ಎಂದೆಂದೂ ಮುಗಿಯದ, ಕೊನೆ ಮುಟ್ಟದ, ನಿತ್ಯನೂತನ ಬದುಕಿನ ನಿರರ್ಗಳವಾಗಿ ಹರಿಯುವ ಜೀವನ ಪ್ರವಾಹದ ಲೇಖಕನ ಭಾವಪ್ರಪಂಚ ಮುದುಕ, ಮುದುಕಿ, ಮೊಮ್ಮಗ, ಅವನ ಹೆಂಡತಿ, ಅಜ್ಜಿ—ಮೊಮ್ಮಗನ ಸಂಬಂಧಗಳಲ್ಲಿ ಮೂಡುತ್ತಾ ಹೋಗುತ್ತದೆ. ಮಗ—ಅಜ್ಜ—ಮೊಮ್ಮಗ—ಗಂಡ—ಗಂಡಿನ ಈ ರೂಪಗಳು ಹೆಂಡತಿ—ಅಜ್ಜಿ ಮುಂತಾದ ಹಲವು ಹೆಣ್ಣಿನ ರೂಪಗಳ ಮಿಳಿತದಲ್ಲಿ ಇಲ್ಲಿಯ ಕಥೆ ಜೀವನ ಪ್ರವಾಹದ ಸೆಲೆಯನ್ನು ಹಿಡಿಯುತ್ತದೆ.

"ಕವಿಯ ಪೂರ್ಣಿಮೆ"ಯಲ್ಲಿ ಅನಂತತೆ ಹಾಗೂ ಮರ್ತ್ಯತೆಗಳು ಅತ್ತಿಗೆ—ಆನಂದ—ಸುಶೀಲರವರ ಸಂಬಂಧದಲ್ಲಿ ಹೇಳುವ ಪ್ರಯತ್ನ ನಡೆದಿದೆ. ಮರ್ತ್ಯತೆಯಲ್ಲಿ ಅನಂತತೆಯನ್ನು ಒಡಮೂಡಿಸುವ ಸುಶೀ—ಆನಂದರ ಸಂಬಂಧದ ಘಳಿಗೆಗಳು, ಈ ಮರ್ತ್ಯತೆಯ ಮುಂದೆ ಅನಂತತೆಗೆ ಸಾಕ್ಷಿಯಾಗಿ ನಿಲ್ಲುವ ಅತ್ತಿಗೆ ಹಾಗೂ ಮಗು. ಬದುಕಿನ ಅಮರತ್ವ—ಮರ್ತ್ಯತೆಯ ಸಂದೇಶಗಳನ್ನು ಗಂಡು ಹೆಣ್ಣಿನ ಜೀವನದ ಮಹೂರ್ತದಲ್ಲಿ ಹೇಳುವ ಪ್ರಯತ್ನ.

ಈ ಸಂಕಲನದ ಎಲ್ಲಾ ಕಥೆಗಳಲ್ಲೂ ಭಿನ್ನವಾಗಿ ನಿಲ್ಲುವ ಕಥೆ ಕೇಂದ್ರ ಪ್ರಜ್ಞೆಯಾಗಿ ಅಬ್ಬಕ್ಕ ಮೂಡಿ ಬಂದ "ತಾಯಿ". ಇಲ್ಲಿನ ಘರ್ಷಣೆ ಅಬ್ಬಕ್ಕ ಕೂಡಿಕೆ ಮಾಡಿಕೊಂಡ ಗಂಡ ಹಾಗೂ ಹಿರಿಯ ಮಗ ಚಲುವನ ಮಧ್ಯದ್ದು. ಅಬ್ಬಕ್ಕ ತುಂಬು ಜವ್ವನದಲ್ಲಿ ಎಲ್ಲವನ್ನೂ ಮರೆಸುವ ರಸಿಕನನ್ನು ಕೂಡಿಕೆ ಮಾಡಿಕೊಂಡವಳು. ಅದರ ನೈತಿಕ—ಅನೈತಿಕ ಪ್ರಶ್ನೆಯಲ್ಲಿ ಅವಳಿಗೆ ಅನ್ನಿಸುವುದು ತನ್ನ ಜಾತಿಯಲ್ಲಿದು ಸಾಮಾನ್ಯವಲ್ಲವೇ ಎಂದು. ಕೈತಪ್ಪಿಸಿಕೊಂಡ ಮಗ ಚಲುವನಿಗಾಗಿ ಕಾಡುವ ಅಬ್ಬಕ್ಕನ ತಾಯಿ ಪ್ರಜ್ಞೆ ಹಾಗೂ ಜವ್ವನದ ಪ್ರಜ್ಞೆ ಇದಿರು—ಬದಿರಾದಾಗ ಮೂಡಿ ಬಂದ ದ್ವಂದ್ವ "ತಾಯಿ" ವಸ್ತು.

ಈ ಮೇಲ್ಕಂಡ ಕಥೆಗಳು ಪ್ರಥಮ ಕಥೆಗಳಾದ್ದರಿಂದ ಇಲ್ಲಿಯ ಕೇಂದ್ರ ಪ್ರಜ್ಞೆಯ ವೈಚಾರಿಕತೆಗಳು, ದ್ವಂದ್ವಗಳು ಬದುಕಿನ ಭಾವನೆಯ ಮಟ್ಟದಿಂದ ಹುಟ್ಟಿದವಾಗಿದ್ದರೂ, ಹೆಣ್ಣು—ಗಂಡಿನ ಪ್ರಜ್ಞೆಯ ಹರವುಗಳ ಮೇಲೆ ಸಮಾನಾಂತರ ಒತ್ತುಕೊಡುವುದು ಕಂಡು ಬಂದ್ದತೆ. ಈ ದೃಷ್ಟಿಯಲ್ಲಿ "ಪಂಜರದ ಗಿಣಿ" ಹಾಗೂ "ಹುಲಿಯ ಹೆಂಗರುಳು" ಭಿನ್ನಕತೆಗಳಾಗಿ ಸ್ತ್ರೀ ಪಾತ್ರದ ವಿಶ್ಲೇಷಣೆಯಲ್ಲಿ ಮೇಲಿನ ಸೂತ್ರಗಳ ಅಡಿಯಲ್ಲಿ ರೂಪಿತವಾದ ಧೋರಣೆಯನ್ನು ಸ್ಪಷ್ಟಪಡಿಸುತ್ತವೆ.

"ಪಂಜರದ ಗಿಣಿ"ಯ ನಾಯಕ ಹೇಳುತ್ತಾನೆ. "ಸೃಷ್ಟಿಯ—" ಸಾವಿನ ದಂಡೆಗೆ ಮತ್ತೊಂದು ತುತ್ತೀಯಲು ಈ ನಿಷ್ಕರುಣ ಶಕ್ತಿಯ ಲೀಲೆಗೆ ಸಾಧನವಾಗಬೇಕೆ? ಏನೂ ಅರಿಯದ ಮುಗ್ಧ ಕಾಮಾಕ್ಷಿಯ ದೇಹದಲ್ಲಿ ಕ್ಷಣಿಕ ಸೌಂದರ್ಯವಾಗಿ ನೆಲೆಸಿ ಕರೆಯುವ ಆ ಕ್ರೂರ ಶಕ್ತಿಯ ಕುರುಡು ಪಾಶಕ್ಕೆ ಇಡಿಯ ಬದುಕನ್ನೇ ಒಡ್ಡಬೇಕೆ?"

ದೀಪ್ತಿ ಬ್ರಹ್ಮಾಂಡಗಳನ್ನರಸಿ, ಪರ್ವತರ ಕರೆಯನ್ನರಿಸಿ, ಅಂಧಕಾರ ಗಾಢಾಂಧಕಾರಗಳಿಂದ ಮೇಲೇರುವ ಉದ್ದೇಶದಲ್ಲಿ ಸ್ವಾತಂತ್ರ್ಯವನ್ನರಸಿ, ದಿವ್ಯವನ್ನರಸಿ, ಹೊರಡುವ ರಾಮುವನ್ನು ಈ ವಾಸ್ತವದ ಜೀವನಕ್ಕೆ ಬಂಧಿಸಲು ಸೆಳೆಯುವವಳು ಕಾಮಾಕ್ಷಿ. ಕಾಮಾಕ್ಷಿ ಅವನರಸುವ ಸ್ವಾತಂತ್ರ್ಯಕ್ಕೆ, ಆ ಸ್ವಾತಂತ್ರ್ಯದ ಅರ್ಥಹೀನತೆಗೆ ಪ್ರಶ್ನೆಯಾಗಿ ನಿಲ್ಲುವವಳಾಗಿ ಬರದೇ ಆತನ ಸ್ವಾತಂತ್ರ್ಯದ ಬಯಕೆಯನ್ನು ಗೋಜಲಾಗಿಸುವ, ತೊಡಕಾಗಿಸುವ ಪ್ರಜ್ಞೆಯಾಗಿ ಮೂಡಿ ಬರುತ್ತಾಳೆ. ಕಾಮಾಕ್ಷಿಯ ಬಗೆಗಿನ ವಿವರಣೆಗಳು, ಕಾಮಾಕ್ಷಿ ಒಡಮೂಡಿ ಬಂದ ಬಗೆಗಳು ಹೆಣ್ಣಿನ ಕಳವಳದ ಪ್ರಜ್ಞೆಯನ್ನು ಎತ್ತಿ ಹಿಡಿಯುತ್ತವೆ. ಈ ವಾಸ್ತವವನ್ನು ಹೆಣ್ಣಿನ ಸಂಬಂಧವನ್ನು ಒಪ್ಪಿಕೊಳ್ಳುವ ರಾಮುವಿನಲ್ಲಿ

ಇದೇ ಬದುಕು ಎನ್ನುವ ಭಾವವಿಲ್ಲ. ಬದಲಾಗಿ ತಾನು ಪಂಜರದ ಗಿಣಿ ಎನ್ನುವ ವಿಷಾದವಿದೆ. ಸಾಮಾನ್ಯ ಬದುಕಿನಿಂದ ದಿವ್ಯಕ್ಕೆ ಏರುವ ಮುಹೂರ್ತ ಘಳಿಗೆಗಳಲ್ಲಿ ತೊಡಕಾಗುವವಳು ಹೆಣ್ಣು ಎಂಬ ಧೋರಣೆ ಇಲ್ಲಿ ವ್ಯಕ್ತವಾಗಿದೆ.

ತಂತ್ರದ ದೃಷ್ಟಿಯಿಂದ ಮಾರ್ಮಿಕವಾಗಿ ಮೂಡಿಬಂದ "ಹುಲಿಯ ಹೆಂಗರುಳು" ವಿನಲ್ಲಿ ಸಿದ್ಧ ಕೊಲ್ಲುವ ಹೆಂಡತಿ ಹಾಗೂ ಆತ ಬದುಕಿಸುವ ವೈರಿ ಶೀನಶೆಟ್ಟಿಯಲ್ಲಿ ಹೇಳ ಹೊರಟಿರುವ ಸಿದ್ಧನ ಮನದ ಹೆಂಗರಳು. ಸತ್ತ ಸಿದ್ಧನ ಹೆಂಡತಿಯ ಬಗ್ಗೆ ವಿವರಗಳಿರದೇ ಕಥೆಯಲ್ಲಿ ಪ್ರಶ್ನೆಯಾಗುವ ಹಾಗೆ ನಮಗೂ ಪ್ರಶ್ನೆಯಾಗುತ್ತಾಳೆ. ಹೆಂಡತಿಯ ಬಗ್ಗೆ ಫ್ಯೂಡಲ್ ಆಗಿರುವ ಸಿದ್ಧ—ವೈರಿ ಶೀನಶೆಟ್ಟಿಯನ್ನು ಬದುಕಿಸುವ ಸಂಗತಿ ಮಹತ್ವದ್ದಾಗುವಾಗ ಸಿದ್ಧನ ಹೆಂಡತಿ ಸಾಂಕೇತಿಕ ಮಾತ್ರ.

"ಪ್ರಶ್ನೆ" ಕಥಾ ಸಂಕಲನದಿಂದ ಮುಂದಿನ ಇವರ ಬರಹಗಳಲ್ಲಿನ ಸ್ತ್ರೀಯರು ಮೇಲ್ಕಂಡ ಸೂತ್ರಗಳ ಧೋರಣೆಯಲ್ಲಿಯೇ ಸ್ಪಷ್ಟವಾಗಿ ಮೂಡಿಬರುತ್ತಾರೆ.

"ಭೋಜ ರಾಜ" ದ ರಾಜಣ್ಣ ನಗರದಲ್ಲಿರುವವನು, ಪಾಶ್ಚಾತ್ಯ ವಿಚಾರ ಧಾರೆಯಿಂದ ಪ್ರಭಾವಿತನು. ಇವನ ನಿಶ್ಚಯಕ್ಕೆ, ಭೋಜತನ ಕಳಚಿಕೊಳ್ಳಲಿಕ್ಕೆ ಅರುಂಧತಿ ಬೇಕು. ಅವಳ ಮೈ ಬೇಕು. ಆತನ ಸುಪ್ತ ಭಾವನೆಗಳಿಗೆ ಬಾಹ್ಯದಲ್ಲಿ ಸ್ಪಷ್ಟ ಅಭಿವ್ಯಕ್ತಿ ಬೇಕು. ಆದರೆ ಚಿಪ್ಪೊಡೆದು ಹೊರಬರದ ಅರುಂಧತಿ ಮಧ್ಯಮ ವರ್ಗದವಳು. ಬಾಹ್ಯದ ಅಭಿವ್ಯಕ್ತಿಗೆ ಮಾನಸಿಕ ಭಯ. ಒಗ್ಗಿಕೊಂಡ ಬದುಕಿನ ಮೌಲ್ಯಗಳನ್ನು ಪ್ರಶ್ನಿಸಲಾರದ, ಮೀರಲಾರದ ಮಾನಸಿಕ ದುರ್ಬಲತೆ. "ಯೂ ಡೋಂಟ್ ನೋ ಹೌ ಅಕ್‌ವರ್ಡ್, ಹೌ ಡಿಫಿಕಲ್ಟ್ ಇಟ್ ಈಸ್ ಫಾರ್ ಎ ವುಮನ್" (ಪು.೧೧೦) ಎನ್ನುವ ಕ್ರಿಯಾಹೀನತೆಯ ದೌರ್ಬಲ್ಯದಲ್ಲಿ ತೃಪ್ತಿಯಾಗುವ ಮೇಲ್ಜಾತಿಯ ಹೆಂಗಸು. ಇದೇ ರೀತಿಯಲ್ಲಿ ಜಾತಿ, ವರ್ಗ ಮೌಲ್ಯಗಳಲ್ಲೇ ರೂಪಿತಳಾದ "ಭಾರತೀಪುರ" ದ ನಾಗಮಣಿ ಒಪ್ಪಿ ಬದುಕುವ ಅನಿವಾರ್ಯತೆಯ ದುರಂತವನ್ನು ತೋರಿಸುವವಳು. ಶೂನ್ಯ ಕಣ್ಣುಗಳಲ್ಲಿ ಮನದಲ್ಲೇ ಸತ್ತು ಕುಣಿಕೆಯಲ್ಲಿ ದೇಹ ನಂದಿಸಿದವಳು. ಒಪ್ಪಂದದ ಬದುಕಿನ ದುರಂತತೆಯನ್ನು ಆತ್ಮಹತ್ಯೆಯಲ್ಲಿ ಒಡಮೂಡಿಸಿದವಳು. ಕಾಲೇಜು ಮೆಟ್ಟಿಲು ಹತ್ತಿಯೂ ಅರುಂಧತಿ ಒಪ್ಪಂದ ಬಯಸುವ ಮಾನಸಿಕ ಸ್ಥಿತಿಯವಳಾದರೆ, ಕಟ್ಟಾ ಸಂಪ್ರದಾಯದಲ್ಲಿದ್ದ ನಾಗಮಣಿ ಒಪ್ಪಂದ ಅನಿವಾರ್ಯವಾದಾಗ, ಒಳದಾರಿ ಕಂಡುಕೊಳ್ಳುವ ಧೈರ್ಯವಿರದೇ ಆತ್ಮಹತ್ಯೆಗೆ ಸರಾಗವಾಗಿ ನಿಶ್ಚಯ ಮಾಡಿದವಳು. ಇಬ್ಬರೂ ಜಾತಿ, ವರ್ಗ, ಮೌಲ್ಯಗಳಿಂದ ರೂಪಿತ ಪ್ರಜ್ಞೆಯ ವ್ಯಕ್ತಿತ್ವಗಳೇ.

ತಾನು ಅಪ್ಪನಾಗಿ ಎಲ್ಲಾ ಕೊಡುವುದರಿಂದಲೇ ಲಕ್ಷ್ಮಿ ಸುಖವಾಗಿರುತ್ತಾಳೆಂಬ ಭಾವನೆಯಲ್ಲಿ ಲಕ್ಷ್ಮಿಯಿಂದ ಇಂದ್ರಿಯ ನಿಗ್ರಹ ಬಯಸುವ "ಪ್ರಕೃತಿ" ಯ ಸಂಕಪ್ಪಯ್ಯ. ಮಗ ನಾರಾಯಣ ಶಿವಮೊಗ್ಗೆಯಲ್ಲಿ ಹೋಟೆಲ್ ಇಡುವ ವಿಚಾರದಲ್ಲಿ ತಂದೆಯ ವಿರುದ್ಧ ನೇರ ಘರ್ಷಣೆಗೆ ತೊಡಗುತ್ತಾನೆ, ತಂದೆಯ ಬದುಕಿಗೆ ಛಾಲೆಂಜ್ ಎನ್ನಿಸುತ್ತಾನೆ. ತನ್ನ ಹಾಗೂ ತಂದೆಯ ಮಧ್ಯದ ಕಾಲದ ಬಿರುಕನ್ನು, ಬದುಕು ಹೊಸ ದಿಕ್ಕಿನತ್ತ ಚಲಿಸುತ್ತಿರುವುದನ್ನು ಸಂಘರ್ಷದಲ್ಲಿ ನೇರವಾಗಿ ತೋರಿಸುತ್ತಾನೆ. ಕಿಟ್ಟುವಿನ ಜೊತೆ ಮಲಗುವ ಲಕ್ಷ್ಮಿಗೆ ಕಾಮ ಮೌಲ್ಯವಾಗಿಲ್ಲ. ಬದುಕಿನ ಹೊಸ ತಿರುವುಗಳಲ್ಲಿ ನಾರಾಯಣ ಅಸ್ತಿತ್ವಕ್ಕೆ ನೇರ ಘರ್ಷಣೆಗೆ ಇಳಿಯುವಂತೆ ಈಕೆ ತಂದೆಗೆ ನೇರವಾಗಿ ಎದುರು ನಿಲ್ಲುವವಳಲ್ಲ. ನಾರಾಯಣ ಛಾಲೆಂಜ್ ಎನ್ನಿಸಿದಂತೆ ಮಗಳು ಲಕ್ಷ್ಮಿ ಸಂಕಪ್ಪಯ್ಯನ ಬದುಕಿಗೆ ಛಾಲೆಂಜ್ ಎನಿಸುವುದಿಲ್ಲ. ಬದಲಾಗಿ ನಾರಾಯಣನ ಜೊತೆಗಿನ ಘರ್ಷಣೆಯಲ್ಲಿ ಹೆಚ್ಚುವ ಸಂಕಪ್ಪಯ್ಯನ ಸಂಕಲ್ಪ ಶಕ್ತಿ ಇಲ್ಲಿ ಕುಗ್ಗುತ್ತದೆ. ವಿಧವೆ ಲಕ್ಷ್ಮಿ ಕಾಮದಲ್ಲಿ ಮಾತ್ರ ನೀತಿ–ಅನೀತಿಯ ಪ್ರಶ್ನೆ ಮೀರುತ್ತಾಳೆ. ಇದೇ ರೀತಿಯಲ್ಲಿ "ಘಟಶ್ರಾದ್ಧ" ದ ಯಮುನಕ್ಕ ಹಾಗೂ "ಪ್ರಶ್ನೆ" ಯ ಪಾರ್ವತಿ ದುರಂತಕ್ಕೊಳಗಾಗುವವರು. "ಭಾರತೀಪುರ" ದ ರೈಟರ್ ಕೃಷ್ಣಪ್ಪನ ಜೊತೆ ಸಂಬಂಧ ಇಟ್ಟುಕೊಂಡ ಜಗನ್ನಾಥನ ತಾಯಿ, "ನವಿಲುಗರಿ" ಯ ನಾಯಕನ ತಂದೆಯ ಜೊತೆ ಸಂಬಂಧ ಇಟ್ಟುಕೊಂಡ ಜಾನಕಮ್ಮ ಕಾಮ ಸಂಬಂಧದಲ್ಲಿ ಜಾತಿ, ಸಮಾಜ, ವರ್ಗದ ಕಟ್ಟುಪಾಡು ಮೀರಿ ಗುಪ್ತ ಸಂಬಂಧ ಕಾಪಾಡಿಕೊಂಡವರು. ಕಟ್ಟು—ನಿಟ್ಟಿನ ಆಚಾರ–ವಿಚಾರಗಳ ಜಾತಿಯ ಮುಷ್ಟಿಯಲ್ಲಿನ ಈ ಹೆಂಗಸರು ಜೀವನದ ಕ್ರಮದಲ್ಲಿ ಇತರರಿಗಿಂತ ಭಿನ್ನರಲ್ಲ. ವಿಶೇಷ ವ್ಯಕ್ತಿತ್ವದವರೂ ಅಲ್ಲ. ಪರಿಸರದಲ್ಲಿ ರೂಪಿತವಾದ ಪ್ರಜ್ಞೆಯಿಂದ ಬಿಡುಗಡೆ ಪಡೆದವರೂ ಅಲ್ಲ. ಗ್ರಾಮೀಣ ಸಂಸ್ಕೃತಿಯ, ವರ್ಗದ, ಜಾತಿಯ ಕಪಿಮುಷ್ಟಿಯಲ್ಲಿದ್ದೂ ಗುಪ್ತ ಲೈಂಗಿಕ ಸಂಬಂಧಕ್ಕೆ ತೊಡ

ಗಿದವರು. ಇಲ್ಲಿ ಬರುವ ನಾಯಕರು — ಹೊಸ ಬದುಕಿಗೆ, ಹೊಸ ಪ್ರಜ್ಞೆಗಳಲ್ಲಿ ಹೆಜ್ಜೆ ಇಟ್ಟವರು, ಪ್ರಜ್ಞಾಪೂರ್ವಕವಾಗಿ ಲೈಂಗಿಕ ವಿಚಾರಗಳನ್ನು ತಾತ್ವಿಕವಾಗಿ ಒಪ್ಪಿಕೊಂಡು, ವ್ಯವಸ್ಥೆಯ ಮೌಲ್ಯಗಳನ್ನು ಮೀರಲು ನೈತಿಕವಾಗಿಯೇ ಬಾಹ್ಯದಲ್ಲಿ ಪ್ರಯತ್ನಿಸಿದರೆ, ಹೆಂಗಸರು ಕಾಮದ ಅನಿವಾರ್ಯತೆಯಲ್ಲಿ ಮಾತ್ರ ವ್ಯವಸ್ಥೆ ಮೀರುವ ಪ್ರಯತ್ನದಲ್ಲಿ ಸಂಬಂಧ ಬಯಲಾದಾಗ ದುರಂತಕ್ಕೀಡಾಗುತ್ತಾರೆ.

“ಪ್ರಶ್ನೆ” ಯ ಪಾರ್ವತಿ ಈ ಬಗೆಯವಳಾದರೆ, ಶಾರದೆ ಇನ್ನೊಂದು ಬಗೆಯವಳು. ಅತಿಪ್ರಜ್ಞೆಯುಳ್ಳವಳು. ಸಾಕಿದ ಶಂಕರಯ್ಯನ ಬಗೆಗಿನ ಮೋಹ, ರಂಗನಾಥನ ಬಗೆಯ ಪ್ರೀತಿಗಳ ದ್ವಂದ್ವದಲ್ಲಿ ಜೀವನದ ನಿರುತ್ಸಾಹಕ್ಕೆ ಬೆನ್ನೊಡ್ಡಿದವಳು. ಬಾವಿಯಲ್ಲಿ ನೀರು ಕುಡಿದ ಅಕ್ಕನ ಹೆಣ ನೆನಪಾದಾಗ - ರಂಗನಾಥನನ್ನು ಮದುವೆಯಾದ ಮೇಲೆ ಯಾಂತ್ರಿಕವಾಗುವ ಕಾಮಜೀವನದ ಬದುಕಿನ ಕಲ್ಪನೆಯಲ್ಲಿ, ರಂಗನಾಥನ ಕಾಮಕ್ಕಿಂತ ಶಂಕರಯ್ಯನ ಮೋಹ ಆಕೆಗೆ ಇಷ್ಟವಾಗುತ್ತದೆ. ತನ್ನ ಸುಪ್ತ ಭಾವನೆಗಳ ಬಗ್ಗೆ ಅರಿವಿದ್ದಾಗ್ಯೂ, ಮೋಹ-ಪ್ರೀತಿಯ ದ್ವಂದ್ವಗಳಲ್ಲಿ ತೊಳಲುತ್ತಾ, ಆದರ್ಶದ ಹಿನ್ನೆಲೆಯಲ್ಲಿ ವಾಸ್ತವ ಜೀವನದ ಕ್ರಮ ಬದಲಾಯಿಸಲು ಸಾಧ್ಯವಾಗದಿರುವ ನಿಷ್ಕ್ರಿಯ ಮನಸ್ಥಿತಿಯ ಶಾರದೆ. ರಂಗನಾಥನ ದ್ವಂದ್ವಗಳು ಆತನ ಅಂತರ್ಮುಖತ್ವ ಬಿಚ್ಚಿಕೊಳ್ಳುವ ಹಾಗೂ ಬಾಹ್ಯದಲ್ಲಿ ಅಭಿವ್ಯಕ್ತಿಸುವ, ನಿಶ್ಚಯಿಸುವ ಮುಖವಾಗಿದ್ದರೆ, ದ್ವಂದ್ವಗಳುಳ್ಳ ಶಾರದೆ ನಿಷ್ಕ್ರಿಯಳಾಗುತ್ತಾ ಹೋಗುತ್ತಾಳೆ.

“ಪಕೃತಿ” ಯ ಸೀತಕ್ಕ, “ಕಾರ್ತೀಕ” ದ ರಾಘವನ ತಾಯಿ-ಅಜ್ಜಿ, “ಪ್ರಸ್ಥ” ದ ಸೀತಕ್ಕ, ವೆಂಕಮ್ಮ, “ಘಟಶ್ರಾದ್ಧ” ದ ಗೋದಾವರಮ್ಮ, “ಕ್ಲಿಪ್ ಜಾಯಿಂಟ್” ನ ಕೇಶವನ ತಾಯಿ-ತಂಗಿಯರು, “ಸಂಸ್ಕಾರ” ದ ಅನಸೂಯ, ಸೀತಾಬಾಯಿ, “ಮೌನಿ” ಯ ಗೌರಮ್ಮ, “ಅವಸ್ಥೆ” ಯ ಸಾವಿತ್ರಮ್ಮ, “ಆವಾಹನೆ” ಯ ಸರಸ್ವತಮ್ಮ ಮುಂತಾದ ಸಾಂಪ್ರದಾಯಕ ಪಾತ್ರಗಳು-ಜೀವನದ ಗಂಟು ಗೋಜಲುಗಳು, ಸಣ್ಣತನಗಳನ್ನು, ಅರ್ಥೈಸುವುದಕ್ಕೆ ಗಂಡಿನ ಕೇಂದ್ರ ಪ್ರಜ್ಞೆಯಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತಾರೆ. ಸಣ್ಣ-ಪುಟ್ಟ ರಗಳೆಗಳಲ್ಲಿ ಮನೆ — ಸ್ಥಿತಿಯನ್ನು ಹತಾಶೆ ಮಾಡುವ ಅತ್ತೆ — ಸೊಸೆಯರು, ತಮ್ಮ ಕಾಲದ ಮೌಲ್ಯಗಳನ್ನು ಸೊಸೆಯರಲ್ಲಿ ಹಾಗೂ ಚಿಕ್ಕ ಹುಡುಗಿಯರಲ್ಲಿ ಹೇರ ಬಯಸುವ ಸಂಪ್ರದಾಯಸ್ಥ ಅತ್ತೆಯರು-ಮುದುಕಿಯರು. ಇವರು ಮನೆಗೆಲಸ, ಬಂಗಾರ, ಆಸ್ತಿ-ಪಾಸ್ತಿಯ ಪ್ರಪಂಚಕ್ಕೆ ಸೀಮಿತವಾದ ಹೆಂಗಸರು. ಎಲ್ಲಾ ಕಥೆಗಳಲ್ಲೂ ಬೇರೆ ಬೇರೆ ಹೆಸರುಗಳಲ್ಲಿ ಬರುವ ಇವರು ವಾಸ್ತವದ ಗೋಜಲು, ಸಣ್ಣತನಗಳನ್ನೇ, ಬದುಕಿನ ಸಂಕುಚಿತಗಳನ್ನೆ, ಬಂಧನಗಳನ್ನು ಸೂಚಿಸಲೆಂಬಂತೆ ಬರುತ್ತಾರೆ. ಇವರ ಬಗ್ಗೆ ಲೇಖಕನಲ್ಲಿ ಉಪೇಕ್ಷಾ ಭಾವ ಕಂಡು ಬರುತ್ತದೆ. ಕೇವಲ ಲೌಖಿಕವನ್ನು ವ್ಯಕ್ತ ಪಡಿಸುವ ವ್ಯಕ್ತಿತ್ವದವರಾಗಿ ಇವರು ಎಲ್ಲಾ ಬರಹಗಳಲ್ಲೂ ಅಭಿವ್ಯಕ್ತಿ ಪಡೆಯುತ್ತಾರೆ. “ಮೌನಿ” ಯ ಮುದುಕಿ ಸೀತಕ್ಕ, “ಸಂಸ್ಕಾರ” ದ ಲಕ್ಷ್ಮೀದೇವಮ್ಮ ಬತ್ತಿಸಿದ ಕಾಮದಲ್ಲಿ, ಕಳೆದುಕೊಂಡ ಆಸ್ತಿ-ಪಾಸ್ತಿಯಲ್ಲಿ ಒಬ್ಬಂಟಿಯಾಗಿ ಉಳಿದು ಮನುಷ್ಯನ ಬಗ್ಗೆ ಉತ್ಪ್ರೇಕ್ಷೆಯುತವಾದ ಪ್ರೀತಿ-ದ್ವೇಷಗಳನ್ನು ಕಾರುವವರು. ಇಬ್ಬರೂ ಆಸ್ತಿ—ಪಾಸ್ತಿ ಕಳೆದುಕೊಂಡ ವಿಧವೆಯರು. ಉತ್ಪ್ರೇಕ್ಷೆಯ ಗುಣಗಳನ್ನು, ಹಿಂಸೆಯ ಬೇರುಗಳನ್ನು, ಮಾನವೀಯ ಅಂಶಗಳನ್ನು ಬತ್ತಿಸಿದ ಕಾಮದಲ್ಲಿ, ಕಳೆದುಕೊಂಡ ಆಸ್ತಿ—ಪಾಸ್ತಿಯಲ್ಲಿ ಹುಡುಕುವ ಲೇಖಕರ ಪ್ರಯತ್ನವನ್ನು ಇಲ್ಲಿ ಗಮನಿಸಬಹುದಾಗಿದೆ.

ಇವರ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಸೂಳೆಯರಲ್ಲೂ ಈ ರೀತಿಯ ಮಾನವೀಯ ಅಂಶಗಳನ್ನು ಕಾಣಬಹುದಾಗಿದೆ. “ನವಿಲುಗಳ” ಜಾನಕಮ್ಮ, ಸಂಸ್ಕಾರದ ಚಂದ್ರಿ, “ಆಕಾಶ ಮತ್ತು ಬೆಕ್ಕು” ವಿನ ಗಂಗೂಬಾಯಿ ನಾಯಕನ ಗುಣಗಳಿಗೆ ಸ್ಪಂದಿಸುವವರಾಗಿ ಬರುತ್ತಾರೆ. ಸಾಯುತ್ತಾ ಬಿದ್ದ ಆಚಾರ್ಯರನ್ನು ನೋಡಲು ಬಂದ ಗಂಗೂಬಾಯಿ, ಅವರು ಸತ್ತಾಗ, ಅವರ ಕರ್ಮಕ್ಕೆಂದು, ಅವರ ಹೆಂಡತಿಗೆ ೫ ಸಾವಿರ ರೂ.ಗಳನ್ನು ಕೊಡುವಷ್ಟು ಔದಾರ್ಯದವಳು. ನಾರಾಯಣಪ್ಪನ ಜೊತೆಗಿದ್ದ ಚಂದ್ರಿ, ಅವನ ಕರ್ಮಕ್ಕಾಗಿ ಬಂಗಾರ ಕೊಡುವುದಕ್ಕೊ ಅಲ್ಲ, ಯಾರೂ ಅವನ ಸಂಸ್ಕಾರ ನಡೆಸದಿದ್ದಾಗ, ಅವನ ಮೇಲಿನ ಪ್ರೀತಿಗೆ ತಾನೇ ಒದ್ದಾಡಿ ಸಂಸ್ಕಾರ ನಡೆಸುತ್ತಾಳೆ. “ನವಿಲುಗಳ” ನಾಯಕ ತಂದೆ ಸಂಬಂಧ ಇಟ್ಟುಕೊಂಡ ಜಾನಕಮ್ಮನ ಮನೆಗೆ ಹೋದಾಗ ಪ್ರೀತ್ಯಾದರಗಳಿಂದ ಸತ್ಕರಿಸುತ್ತಾಳೆ. ಹಾಗೆಯೇ “ಅವಸ್ಥೆ” ಯ ಗೌರಿ ದೇಶಪಾಂಡೆಯ ತಾಯಿ ಅನಸೂಯಬಾಯಿ ಸಹ, ಮಾನವೀಯತೆಯ ಬೇರುಗಳನ್ನು ಕಾಮದಲ್ಲಿ ತೃಪ್ತಿಯಾ

ಗುವ ದೇಹ—ಮನಸ್ಸಿನಲ್ಲಿ ಹುಡುಕುವ ಲೇಖಕರ ಧೋರಣೆ ಇಲ್ಲಿಯೂ ಸಹ ಕಂಡುಬರುತ್ತದೆ.

"ಕಾರ್ತೀಕ" ದ ಛಾಯಾ, "ಬರ" ದ ರೇಖಾ "ನವಿಲುಗಳ" ನಾಯಕನ ಹೆಂಡತಿ, "ಆಕಾಶ ಮತ್ತು ಬೆಕ್ಕು" ನ ನಾಯಕನ ಹೆಂಡತಿ, "ಆವಾಹನೆ" ಯ ಸರೋಜ, ಮೇಲಿನ ಗ್ರಾಮೀಣ ಸಂಸ್ಕೃತಿಯ ಮೌಲ್ಯಗಳಿಗೆ ಹೊರತಾದವರು. ನಾಗರೀಕತೆಯ ಸೋಂಕಿರುವ ಪಟ್ಟಣದ ಹೆಂಗಸರು, ಪರಿಸರದ ಒತ್ತಡದಲ್ಲಿ ಮೇಲ್ಕಡ ಹೆಂಗಸರ ಪ್ರಪಂಚಕ್ಕೆ ಹೊರತಾದವರು. ಬದಲಾದ ಪರಿಸರದಲ್ಲಿ ಬದಲಾದವರೇ ಹೊರತು ಅತಿ ಪ್ರಜ್ಞೆಯ ಭಾವುಕರಲ್ಲ. ಸರಳ ಮನಸ್ಸಿನ, ಭೂತವಿರದ ಹೆಂಗಸರು. ತಮ್ಮ ಜೊತೆಗಿನ ಬಾಳುಬಿಟ್ಟು ಉಳಿದೆಲ್ಲ ಅಸಂಗತ, ನಿಷ್ಪ್ರಯೋಜಕ ಎಂಬಂತೆ ವರ್ತಿಸುವವರು. ಗಂಡಿನ ಏಕಾಂಗಿತನ, ಭೂತ, ಅತಿಪ್ರಜ್ಞೆ, ಭಾವುಕ ಪ್ರಪಂಚ ಅರಿತುಕೊಳ್ಳಲಾರದ ದುರ್ಬಲರು. "ಬರ" ದ ರೇಖಾ ಮಾತ್ರ ಇವರಲ್ಲಿ ಸ್ವಲ್ಪ ಭಿನ್ನವಾಗುತ್ತಾಳೆ. ಲೌಕಿಕ ಅಭಿವ್ಯಕ್ತಿಸುವ ಸಂಪ್ರದಾಯಸ್ಥ ಹೆಂಗಸರ ಬಗೆಗಿನ ಲೇಖಕರ ಉಪೇಕ್ಷೆ ಭಾವವನ್ನೇ ಇಲ್ಲಿಯೂ ಸಹ ಕಾಣಬಹುದಾಗಿದೆ.

ಬದುಕಿನ ಜಂಜಡಗಳಿಗೆ ಬೇಸತ್ತು, ಅಂಥಹ ರಗಳೆಗಳಲ್ಲೋ, ಕ್ಷುದ್ರತೆಗಳಲ್ಲೋ, ಒಳಾದರಿಗಳಲ್ಲೋ ತಮ್ಮನ್ನು ಅಸರ್ಟ್ ಮಾಡಿಕೊಳ್ಳುವ "ಭಾರತೀಪುರ" ದ ಭಾಗ್ಯಮ್ಮ. "ಆಕಾಶ ಮತ್ತು ಬೆಕ್ಕು" ವಿನ ಅಲಕಾವತಿ, "ಅವಸ್ಥೆ" ಸೀತಮ್ಮ. "ಪ್ರಸ್ಥ" ದ ನೇತ್ರಾವತಿ, ವ್ಯವಸ್ಥೆಯನ್ನು ಮೀರಿನಿಂತು ತಮ್ಮನ್ನು ಸ್ಥಾಪಿಸಿಕೊಳ್ಳಲು ಕ್ಷುದ್ರ ಪ್ರಪಂಚದಲ್ಲೇ ಪ್ರಯತ್ನಿಸುತ್ತಾರೆ. "ಅವಸ್ಥೆ" ಸೀತೆಯ ಬದುಕಿನ ಸಂಕುಚಿತತೆಗೆ ಅರ್ಥವಿರುವಂತೆ ಅಲಕಾವತಿಯ ತಂತ್ರಗಳಿಗೂ, ಭಾಗ್ಯಮ್ಮನ ರಗಳೆಗೂ ಅರ್ಥವಿದೆ. ಕೃಷ್ಣಪ್ಪ ಗೌಡ ಹೊಡೆದಾಗಲೆಲ್ಲಾ ಸೀತೆ ವಿರೋಧಿಸುತ್ತಾಳೆ. "ಹೆಂಡತಿಯನ್ನು ಹೊಡೆಯುವವರು ಏನು ಕ್ರಾಂತಿ ಮಾಡುತ್ತಾರೆ" ಎಂದು ಹಂಗಿಸುತ್ತಾಳೆ. ಮಗಳ, ತನ್ನ ನೆಲೆಯ ಬಗ್ಗೆ ಯೋಚಿಸುತ್ತಾಳೆ. ಬ್ಯಾಂಕಿನಲ್ಲಿ ಕೆಲಸ ಮಾಡುವ ಹೆಂಗಸಿಗೆ, ಇರುವ ಎಲ್ಲಾ ಮೌಲ್ಯಗಳೂ ಈಕೆಗೆ ಇರುವುದಾದರೂ, ಗಂಡ ವಿಶೇಷ ವ್ಯಕ್ತಿತ್ವವುಳ್ಳವನಾದರೂ, ತನ್ನನ್ನು ತನ್ನ ಸೀಮಿತ ಬದುಕನ್ನು ಅರ್ಥೈಸಿಕೊಳ್ಳಲು ಹೆಣಗುವ ಸಾಮರ್ಥ್ಯವಿರುವಾಕೆ. ಹಾಗೆಯೇ "ಭಾರತೀಪುರ" ದ ಭಾಗ್ಯಮ್ಮ, ಮನೆಯ ಆರ್ಥಿಕ ಪರಿಸ್ಥಿತಿ ಗಂಡನ ಪ್ರಾಮಾಣಿಕತೆಯಲ್ಲಿ ಸುಧಾರಿಸದಿದ್ದಾಗ ಯಾತ್ರಿಕರನ್ನು ಮನೆಗೆ ಕರೆಸುವ, ದೇವಸ್ಥಾನಕ್ಕೆ ಊಟಕ್ಕೆ ಹೋಗುವ ಒಳದಾರಿ ಕಂಡುಕೊಂಡು ಅದನ್ನು ಸಮರ್ಥಿಸಲು ಸಾಮರ್ಥ್ಯವಿರುವ ಹೆಂಗಸು. "ಆಕಾಶ ಮತ್ತು ಬೆಕ್ಕು" ವಿನ ಅಲಕಾವತಿ ಸಹ ಹೀಗೆಯೇ. ಷಂಡನಾಗಿರುವ ಗಂಡನಿಂದ ಸುಖ ಸಾಧ್ಯವಿಲ್ಲನೆಂದಾಗ ಆಚಾರ್ಯರನ್ನು ಇಷ್ಟಪಟ್ಟು ಧೈರ್ಯವಾಗಿಟ್ಟುಕೊಂಡು ತನ್ನನ್ನು ಸಮರ್ಥಿಸಿಕೊಳ್ಳಬಲ್ಲವಳು. ಈ ಹೆಂಗಸರು ಸೀಮಿತ ಪ್ರಪಂಚಕ್ಕೆ ಸೇರಿದವರಾದರೂ, ತಮ್ಮ ಬದುಕನ್ನು ಸಾಧಿಸಲು ಹೆಣಗುವ, ವಿರೋಧಿಸುವ ಕ್ರಿಯೆಯಲ್ಲಿ ತೊಡಗುವ ಸಾಮರ್ಥ್ಯ ಉಳ್ಳವರು. ಹಾಗಾಗಿಯೇ ಮೇಲಿನ ಹೆಂಗಸರಷ್ಟು ಕ್ರಿಯಾಹೀನರಾಗಿ ಇವರು ಉಳಿದುಕೊಳ್ಳುವುದಿಲ್ಲ.

ಈ ಮೇಲಿನ ಪ್ರಪಂಚಕ್ಕೆ ಭಿನ್ನವಾಗಿ ಬರುವ ಸ್ತ್ರೀಯರು: ೧) ಶೂದ್ರ ಹೆಂಗಸರು, ೨)ವಿದೇಶೀ ಹೆಂಗಸರು. ಇವರೀರ್ವರ ಬಗ್ಗೆ ಮೆಚ್ಚುಗೆಯ, ಪ್ರಶಂಸಾರ್ಹನೀಯ ಧೋರಣೆ ಲೇಖಕರಲ್ಲಿ ಕಂಡುಬರುತ್ತದೆ.

ಶೂದ್ರ ಹೆಂಗಸರ ಪ್ರಪಂಚದಲ್ಲಿ ಮೇಲ್ಜಾತಿಯ ಹೆಂಗಸರ ಜಾತಿಯ ಕಟ್ಟುನಿಟ್ಟುಗಳಿಲ್ಲ. ಮರ್ಯಾದೆ, ಅವಲಂಬನೆ, ಅತಿಪ್ರಜ್ಞೆಯ ಯಾವ ಸೂಕ್ಷ್ಮಗಳೂ ಇವರಿಗೆ ಕಾಡುವುದಿಲ್ಲ. ದ್ವಂದ್ವವಿಲ್ಲದೇ ಬದುಕುತ್ತಾರೆ. ಕ್ಷಣಗಳಲ್ಲಿ ಐಕ್ಯ ಮಾಡುತ್ತಾರೆ. ಜೀವನ ಪ್ರವಾಹದಲ್ಲಿ ಮೇಲ್ಕಂಡ ಜಾತಿಯ ಹೆಣ್ಣುಗಳಿಗಿಂತ ಬೇರೆಯ ತೆರನಾದ ಮೌಲ್ಯಗಳಿಗೆ ಮೈಯೊಡ್ಡುತ್ತಾರೆ. "ಪ್ರಶ್ನೆ" ಯ ಶಾರದೆಯ ದ್ವಂದ್ವ ಲಚ್ಚಿಗಿಲ್ಲ. ಅಸ್ತಿಮನೆ ಇರದ ಲಚ್ಚಿಗೆ ತಂದೆ–ಗಂಡನ ಬಿಗಿ ಹಿಡಿತವೂ ಇಲ್ಲ. ಆಕೆಯ ಹುಟ್ಟು ನಂಜಿ–ಶಂಕರಯ್ಯನ ಅನೈತಿಕ ಸಂಬಂಧದಲ್ಲಿ. ಶಾರದೆಯ ವಿಚಾರದಲ್ಲಿ ಕೆಲಸ ಮಾಡುವ ಜಾತಿ ಪ್ರಜ್ಞೆ, ಪಿತೃ ಸಂಸ್ಕೃತಿಯ ಮೌಲ್ಯಗಳು, ಆಸ್ತಿ—ಆರ್ಥಿಕ ಸಂಬಂಧಗಳು ಲಚ್ಚಿಯ ಪ್ರಜ್ಞೆಯಲ್ಲಿ ಕೆಲಸ ಮಾಡುವುದಿಲ್ಲ. ಲೈಂಗಿಕ ಕ್ರಿಯೆಯ ನೀತಿ—ಅನೀತಿ ಪ್ರಶ್ನೆ ಆಕೆಗಿಲ್ಲ. ಅದು ಒಂದು ಕ್ರಿಯೆ ಮಾತ್ರ. "ಕಾರ್ತೀಕ" ದ ಅಬ್ಬಕ್ಕ ಸಹ ಅತಿಪ್ರಜ್ಞೆ ಕಾಡದವಳು. ಗಂಡ ಶುಕ್ರ ಹಾಗೂ ರಾಮಿಯ ಸಂಬಂಧ ಗೊತ್ತಾದಾಗ, ಥಳಕ್ಕೆಂದು ಸೇರೆಗಾರ ವೆಂಕಪ್ಪನ ಸ್ನೇಹ ಬೆಳೆಸಿ, ತಾಳಿ ಕಿತ್ತೆಸೆದು ಬದುಕುವವಳು. ಶುಕ್ರ ಮತ್ತೆ ತನ್ನಲ್ಲಿಗೆ ಬಂದಾಗ ಸೇರೆಗಾರ ವೆಂಕಪ್ಪನನ್ನು ದ್ವಂದ್ವವಿಲ್ಲದೇ ಹಿಂದೆ ಸರಿಸುವವಳು.

ಪಾಪಪ್ರಜ್ಞೆ ಕಾಡದವಳು. ಹಾಗೆಯೇ "ತಾಯಿ" ಯಲ್ಲಿನ ಅಬ್ಬಕ್ಕ ಶೂದ್ರ ಹೆಂಗಸರ ಪ್ರಪಂಚದಲ್ಲೇ ಭಿನ್ನವಾಗಿ ನಿಂತು ದ್ವಂದ್ವ ಉಳ್ಳವಳಾಗಿರುವುದು, ಬಹುಶಃ ಅನಂತಮೂರ್ತಿಯವರ ಪ್ರಥಮ ಕಥೆಗಳಲ್ಲೊಂದಾದ್ದರಿಂದ ಎನ್ನಿಸುತ್ತದೆ. "ಭಾರತೀಪುರ" ದ ಕಾವೇರಿ. ಇತರೇ ಹೊಲತಿಯರು, "ಪ್ರಶ್ನೆ" ಯ ನಂಜಿ, "ಸಂಸ್ಕಾರ" ದ ಚಂದ್ರಿ, ಬೆಳ್ಳಿ ಕಾಮಕ್ಕೆ ಮುಕ್ತವಾಗಿ ತೆರೆದುಕೊಳ್ಳಬಲ್ಲ ಪಾತ್ರಗಳು. ನಾರಾಯಣಪ್ಪ ಹಾಗೂ ಪ್ರಾಣೇಶಾಚಾರ್ಯರ ಜೀವನದ ಮುಹೂರ್ತ ಘಳಿಗೆಗಳಲ್ಲಿ ಕೇಂದ್ರವಾಗುವ, ಅವರ ನಿಶ್ಚಯಗಳಿಗೆ ಕಾರಣಳಾಗುವ ಚಂದ್ರಿ, ಪ್ರಶ್ನೆಗಳನ್ನು ಎತ್ತುವವಳಲ್ಲ, ಅವರ ಜೀವನಕ್ಕೆ ಸಾಕೇತಿಕ ಅರ್ಥ ನೀಡುವವಳು ಮಾತ್ರ.

ಶೂದ್ರ ಹೆಣ್ಣುಗಳು, ಅನಂತಮೂರ್ತಿಯವರ ಸಾಹಿತ್ಯದಲ್ಲಿ ಮೂಡಿಬರುವ ಬಗ್ಗೆ ಜೆ. ಎಚ್ ನಾಯಕರು ಹೇಳುವ "ಪೋಷಕ ದ್ರವ್ಯ" ಎನ್ನುವ, ಒಂದೇ ಅಚ್ಚಿನಲ್ಲಿ ಹೊಯ್ದ ಪಾತ್ರಗಳು ಬೇರೆ ಬೇರೆ ಕಥೆಗಳಲ್ಲಿ ಭಿನ್ನ ಭಿನ್ನ ಹೆಸರು ಪಡೆದು ಬರುತ್ತಾರೆನ್ನುವ ಅಂಶ ಗಮನಾರ್ಹ ಸಂಗತಿ. ಹಾಗೆಯೇ ಶೂದ್ರ ಹೆಣ್ಣುಗಳು ದೈಹಿಕವಾಗಿ ತುಂಬಿಕೊಂಡವರು. ಮೇಲ್ಜಾತಿಯ ಹೆಂಗಸರ ಹಾಗಲ್ಲ. ಮುಂದುವರೆದು ಅವರು ಹೇಳುವ, "ಒಟ್ಟಿನಲ್ಲಿ ಇವರ ಸಹಜ ಕಾಮ ವ್ಯಾಪಾರವನ್ನು ಸಂಪ್ರದಾಯ ಜನರ ಬದುಕಿನ ಬರಡುತನ, ಅಸಹಜತೆಯನ್ನು ತೀವ್ರಗೊಳಿಸಲೆಂದು ಒಂದು ರೀತಿಯ ಪ್ರಶಂಸಾಭಾವದಿಂದೆಂಬಂತೆ ಅನಂತಮೂರ್ತಿಯವರು ಚಿತ್ರಿಸುತ್ತಾರೆ. ಖೋಜರಾಜ, ಮತ್ತು ಪ್ರಶ್ನೆ-ಕಥೆಗಳಲ್ಲಿನ ಕಪ್ಪೆಗಳನ್ನು ಬಳಸಿಕೊಂಡಂತೆಯೇ ಹೆಚ್ಚು ಕಡಿಮೆ ಇವರನ್ನೂ ಬಳಸಿಕೊಳ್ಳಲಾಗಿದೆ"— (ಸಮಕಾಲೀನ—ಪು. ೫೦) ಮಾತು ಶೂದ್ರ ಹೆಣ್ಣುಗಳ ಬಗ್ಗೆ ಇವರ ಸಾಹಿತ್ಯದಲ್ಲಿ ಮೂಡಿ ಬಂದ ಧೋರಣೆಯನ್ನು ಸ್ಪಷ್ಟವಾಗಿಸುತ್ತದೆ.

ಇವರ ಸಾಹಿತ್ಯದ ವಿದೇಶೀ ಸ್ತ್ರೀಯು ಭಾರತೀಯ ಸ್ತ್ರೀಯರಿಗಿಂತ ವಿಭಿನ್ನ ಮೌಲ್ಯಗಳನ್ನು ಪ್ರತಿನಿಧಿಸುತ್ತಾರೆ. ಸಂಗೀತ, ಕುಣಿತ, ಚರ್ಚೆ, ಕಲೆಗಳಲ್ಲಿ ಆಸಕ್ತಿ ಹೊಂದಿರುವ "ಆಕ್ರಮಣದ" ಐರ್ಲೆಂಡಿನ ಶೀಲ, ಲೆಫ್ಟಿಸ್ಟ್ ಧೋರಣೆ ಹೊಂದಿ, ಇಂಡಿಯಾಕ್ಕೆ ಚೈನಾ ಮಾದರಿಯ ಕ್ರಾಂತಿ ಬೇಕೆನ್ನುವ "ರೂತ್ ಮತ್ತು ರಸೂಲ್" ನ ಜರ್ಮನಿಯ ರೂತ್ ರಾಜಕೀಯ ಹಾಗೂ ಬೇರೆ ಬೇರೆ ಆಸಕ್ತಿಗಳಿಗೆ ತೆರೆದುಕೊಂಡ ಲೈಂಗಿಕ ಸಂಬಂಧದಲ್ಲಿ ಸೂಕ್ಷ್ಮತೆ ಹುಡುಕುವ, ಜಗನ್ನಾಥನಿಗೆ ಪ್ರತಿಕ್ಷಣದಲ್ಲೂ ಸ್ಪಂದನೆಗೆ ಬೇಕೆನ್ನಿಸುವ "ಭಾರತೀ ಪುರ" ದ ಮಾರ್ಗರೇಟ್, ಈ ಎಲ್ಲರ ಬಗ್ಗೆ ಲೇಖಕರಲ್ಲಿ ಪ್ರಶಂಸಾಭಾವ ಕಂಡು ಬರುತ್ತದೆ. ಇವರ ಕ್ರಾಂತಿಕಾರೀ ಮನೋಭಾವಕ್ಕೆ ಇವರ ದೇಶದ, ಆರ್ಥಿಕ, ಸಾಮಾಜಿಕ ಹಿನ್ನೆಲೆಗಳಲ್ಲಿ ಬೇರುಗಳನ್ನು ಕಾಣಬಹುದಾಗಿದೆ.

ಸ್ತ್ರೀ ಪಾತ್ರದ ವಿಶ್ಲೇಷಣೆಗೆ ಬಂದಾಗ "ಅವಸ್ಥೆ" ಇವರ ಎಲ್ಲಾ ಕಥೆ — ಕಾದಂಬರಿಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಬದುಕು ಇಲ್ಲಿ ಹಲವು ಆಯಾಮಗಳನ್ನು ಹೊಂದಿ ವಿಸ್ತೃತಗೊಂಡಿರುವುದರಿಂದಲೇ, ಇಲ್ಲಿನ ಸ್ತ್ರೀಯರ ಪ್ರಪಂಚವೂ ಭಿನ್ನವಾಗಿದೆ. ಸೀತಕ್ಕ, ಉಮೆ, ಗೌರಿದೇಶಪಾಂಡೆ, ಲೂಸಿನಾ, ಜ್ಯೋತಿ ಇವರ ಬರಹಗಳಲ್ಲೇ ಕ್ರೀಯೆಯ ಸಾಧ್ಯತೆಯ ಸಾಮರ್ಥ್ಯದಿಂದ ಮೂಡಿ ಬಂದ ಪಾತ್ರಗಳು. (ಸೀತೆಯ ಬಗ್ಗೆಗಿನ ವಿಶ್ಲೇಷಣೆ ಹಿಂದೆ ಇದೆ) ಮಾರ್ಕ್ಸಿಸಂನ ಧೋರಣೆ ಎತ್ತಿ ಹಿಡಿಯುವ ಅಣ್ಣಾಜಿ ಕೆಲವು ಭಾಗಗಳಲ್ಲಿ ಮುಖ್ಯವಾಗಿ ಕಾಣಿಸಿಕೊಂಡು ಎತ್ತುವ ಹೆಣ್ಣಿನ ಬಗೆಗಿನ ಪ್ರಶ್ನೆಗಳು ಮೂಲಭೂತ ಪ್ರಶ್ನೆಗಳಾಗಿವೆ. ಈ ದೃಷ್ಟಿಯಿಂದ ಉಮೆ ಇವರ ಬರಹಗಳಲ್ಲೇ ಮುಖ್ಯ ಸ್ತ್ರೀ ಪಾತ್ರವಾಗಿ ಕಾಣಿಸಿಕೊಳ್ಳುತ್ತಾಳೆ. ಹೆಂಗಸರ ಸಾಮರ್ಥ್ಯಕ್ಕೆ ಪರಿಸರದಲ್ಲೇ ಬೇರುಗಳನ್ನು ಹುಡುಕುವ ಅನಂತಮೂರ್ತಿಯವರು ಉಮೆಯ ವಿಚಾರದಲ್ಲಿ ಅದೇ ಧೋರಣೆ ತೋರಿಸಿದ್ದರೂ, ಕಾನ್ವೆಂಟಿನಲ್ಲಿ ಕಲಿತ — ಮ್ಯಾಜಿಸ್ಟ್ರೇಟರ ಮಗಳು, ಶ್ರೀಮಂತನೋರ್ವನ ಹೆಂಡತಿಯಲ್ಲೂ ಈ ಹೊಸ ಬದುಕಿಗೆ ಮುಖ ಮಾಡುವ ಸಾಮರ್ಥ್ಯ ಗುರುತಿಸುವುದರಿಂದ ಉಮೆ ಹೆಚ್ಚು ಮಹತ್ವ ಉಳ್ಳ ಪಾತ್ರವಾಗುತ್ತಾಳೆ. ಗೌರಿದೇಶಪಾಂಡೆ, ಹಾಗೂ ಲೂಸಿನಾ ಕ್ರಿಯೆಯ ಸಾಮರ್ಥ್ಯ ಉಳ್ಳ ಹೆಂಗಸರಾದರೂ ಅವರ ಸೂಕ್ಷ್ಮತೆಗೆ ಅವರ ಹಿನ್ನೆಲೆಗಳ ಮೇಲೆ ಒತ್ತು ಇದೆ, ಗೌರಿದೇಶಪಾಂಡೆಯ ತಾಯಿ-ಅನಸೂಯ ಬಾಯಿ ಗಂಡನನ್ನು ಬಿಟ್ಟು ಓಡಿ ಬಂದು ಮಂಜಪ್ಪನವರಿಗೆ ಸೂಳೆಯಾದ ಹಿನ್ನೆಲೆಯಲ್ಲಿ, ಗೌರಿಯ ಭಿನ್ನ ವ್ಯಕ್ತಿತ್ವ ರೂಪಿತಗೊಂಡಿರುವ ಪರಿಸರದ ಒತ್ತು ಇದೆ. ಹಾಗೆಯೇ ಲೂಸಿನಾ. ಮಧ್ಯಮ ವರ್ಗದ ತಂದೆ— ತಾಯಿಯ ರಗಳೆಗೆ ಬೇಸತ್ತು ಯಾರಿಂದಲೋ ಮೋಸ

ಹೋಗಲ್ಪಟ್ಟು, ಜೀವನದಲ್ಲಿ ಬೇರೆಯಾಗಿ ನಿಲ್ಲುವಲ್ಲಿ, ಅವಳ ಹಿನ್ನೆಲೆಯ ಒತ್ತು ಇದೆ. ಆದರೆ ಕಾನ್ವೆಂಟಿನಲ್ಲಿ ಕಲಿತ ಮ್ಯಾಜಿಸ್ಟ್ರೇಟರ ಮಗಳು ಉಮೆ ಅಣ್ಣಾಜಿಯ ವಿಚಾರ ಧಾರೆಯ ಅಡಿ — ಯಾವ ಪಾಪ ಪ್ರಜ್ಞೆಯೂ ಇಲ್ಲದೇ ಅವನ ಜೊತೆ ಸಂಬಂಧಪಟ್ಟುಕೊಂಡು, ಓಡಿಹೋಗಲೂ ತಯಾರಾಗುವಳು. ಅತನ ಕ್ರಾಂತಿಕಾರಕ ವಿಚಾರಗಳಿಗೆ ಸ್ಪಂದಿಸುವವಳು. ಮೇಲ್ವರ್ಗದ ಹೆಂಗಸಿನ ಸಾಮರ್ಥ್ಯ ಗುರುತಿಸಲು ಇಲ್ಲಿ ಸಾಧ್ಯವಾಗುವುದರಿಂದಲೇ, ಈ ಸಂಬಂಧ ಇಲ್ಲಿ ಬಹಳ ಮುಖ್ಯವಾಗಿದೆ, ಖಾಸಗೀ ಆಸ್ತಿಯ ಜೊತೆಗೆ ಬೆಳೆದುಬಂದ ಹೆಣ್ಣಿನ ಬಂಧನವನ್ನು, ಪಾವಿತ್ರ್ಯವನ್ನು, ಉಮೆಯ ಮನಸ್ಸಿನಲ್ಲಿ ತುಂಬಿ ಆಕೆ ಬದಲಾಗತೊಡಗುವ ಹಂತದಲ್ಲಿಯೇ ಅಣ್ಣಾಜಿ ಸತ್ತು, ಉಮೆ ಯಥಾಪ್ರಕಾರ ಮತ್ತೆ ಗಂಡನ ಹರಿಗೆಯ ಯಂತ್ರವಾಗಿ ಉಳಿಯುತ್ತಾಳೆ. ಪರಿಸರದ ಒತ್ತಡದಲ್ಲಿ ಬದಲಾಗುವ ಸಾಮರ್ಥ್ಯ ತೋರಿಸಿದ ಉಮೆ, ಪರಿಸರ ದೂರವಾದಾಗ ಆ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾಳೆ, ಇಲ್ಲಿಯೂ ಸಹ ಹೆಣ್ಣಿನ ಸಾಮರ್ಥ್ಯವನ್ನು ಪರಿಸರದ ಅಡಿಯಲ್ಲಿ ಮಾತ್ರ ಗುರುತಿಸುವ ಪ್ರಯತ್ನ ನಡೆದಿದೆ.

ಗೌರಿ ವಿಶೇಷ ಸಂದರ್ಭದ ಹಿನ್ನೆಲೆಯಲ್ಲಿ ಹೊಸ ಬದುಕಿಗೆ ತೆರೆದುಕೊಂಡವಳು. ತನ್ನ ದೇಹ ಮಕ್ಕಳನ್ನು ಪಡೆಯುವ ಸಾಧನವಾಗಬಾರದೆನ್ನುವ ಗಟ್ಟಿ ನಂಬಿಕೆ ಉಳ್ಳವಳು. ಬೇರೆ ಬೇರೆ ಗಂಡಸರ ಜೊತೆ ಬೆರೆಯುವ ಅನುಭವಕ್ಕೆ ಹಾತೊರೆಯುವವಳು. ಅನಂತಮೂರ್ತಿಯವರ ಬರಹಗಳಲ್ಲೇ ಕ್ರಾಂತಿಕಾರಕ ಮನೋಭಾವ ಹೊಂದಿದ ಭಾರತೀಯ ಹೆಣ್ಣೆಂದರೆ ಗೌರಿ. ಕೃಷ್ಣಪ್ಪಗೌಡನನ್ನು ಸಂಭೋಗಿಸುವಾಗ ಆಕೆ ತೆಗೆದುಕೊಳ್ಳುವ ಇನಿಶಿಯೇಶ್ವ ಮುಖ್ಯವಾಗುವುದು ಗೌರಿಯ ವ್ಯಕ್ತಿತ್ವದ ನಿರೂಪಣೆಯಲ್ಲಿ. ಸಂಭೋಗದಲ್ಲಿ ಹೆಣ್ಣು ನಿಷ್ಕ್ರಿಯಳು ಎನ್ನುವ ಕಲ್ಪನೆಯಿಂದಲೇ ಸ್ತ್ರೀಯ ಕೀಳರಿಮೆಯ ಮನೋಭಾವವನ್ನು ಸ್ತ್ರೀಯ ಬಗ್ಗೆಗಿನ ಧೋರಣೆಗಳನ್ನು ರೂಪಿಸಿಕೊಂಡ ಫ್ರಾಯ್ಡ್‌ನ ವಿಚಾರಧಾರೆಯನ್ನು ತಳ್ಳಿಹಾಕುವಂತಹ ವ್ಯಕ್ತಿತ್ವಗಳಾಗಿ ಗೌರಿ ಹಾಗೂ ಲೂಸಿನಾ ಇಬ್ಬರೂ ಮೂಡಿಬರುತ್ತಾರೆ.

ಜೀವನದ ಕಡಿಮೆ ವಿವರಗಳಲ್ಲೂ ಮಹತ್ವದ ಸಾಮರ್ಥ್ಯಗಳನ್ನು ಸ್ತ್ರೀಯರಲ್ಲಿ ಗುರುತಿಸುವುದರಿಂದಲೇ ಸ್ತ್ರೀ ಬಗ್ಗೆಗಿನ ಧೋರಣೆಯಲ್ಲಿ ಈ ಕಾದಂಬರಿ ಹೆಚ್ಚು ಮಹತ್ವ ಪಡೆಯುತ್ತದೆ. ಗ್ರಾಮೀಣ ಹಾಗೂ ನಾಗರೀಕತೆಯ ಸೋಂಕಿರುವ, ಕ್ರಾಂತಿಕಾರಕ ವಿಚಾರಗಳಿಗೆ, ಭಿನ್ನ ಆಸಕ್ತಿಗಳಿಗೆ ತೆರೆದುಕೊಂಡ ಭಾರತೀಯ ಹೆಂಗಸರ ಸಾಮರ್ಥ್ಯಗಳು ಇಲ್ಲಿ ಕಾಣಿಸುವುದರಿಂದಲೇ ಮೇಲ್ಕಂಡ ಸೂತ್ರಗಳಿಗೆ ಭಿನ್ನವಾಗಿ ಇಲ್ಲಿನ ಸ್ತ್ರೀ ಪಾತ್ರಗಳು ನಿಲ್ಲುತ್ತವೆ.

ಅನಂತಮೂರ್ತಿಯವರ ಬಹುತೇಕ ಬರಹಗಳಲ್ಲಿ ಹೆಣ್ಣು ಕೇಂದ್ರ ಪ್ರಜ್ಞೆಗೆ ಪೋಷಕ ಪ್ರಜ್ಞೆಯಾಗಿ, ಕೇಂದ್ರ ಪಾತ್ರಕ್ಕೆ ಸಾಂಕೇತಿಕ ಅರ್ಥದಲ್ಲಿ ಮಾತ್ರ ಧ್ವನಿಸುವುದರಿಂದಲೇ ಇವರ ಸಾಹಿತ್ಯದಲ್ಲಿ ಜಾತಿ, ವರ್ಗ, ಪರಿಸರದ ಜೊತೆ ಸ್ತ್ರೀಯ ಗುಣಗಳ ಸರಳೀಕೃತ ಸಮೀಕರಣ ನಡೆದಿದೆ. ಸತ್ಯಶೋಧನೆಯಲ್ಲಿ, ಬದುಕನ್ನು ಅರ್ಥೈಸುವಲ್ಲಿ, ನಾಯಕನ ಬುದ್ಧಿಜನ್ಯ ವೈಚಾರಿಕ ಧೋರಣೆಗೆ ಹೆಚ್ಚು ಒತ್ತು ಬೀಳುವುದರಿಂದ ಸಣ್ಣ ವಿವರಗಳಲ್ಲಿ ಸ್ತ್ರೀಯರ ವ್ಯಕ್ತಿತ್ವದ ಆಯಾಮಗಳನ್ನು ಧ್ವನಿಸುವುದರಲ್ಲಿ ಇವರು ಸೋಲುತ್ತಾರೆ. ಕಾದಂಬರಿಯ ಅಥವಾ ಕಥೆಯ ಮಿತಿ ಎಂಬುದು ಕ್ಷಮಾರ್ಹವಲ್ಲ ಏಕೆಂದರೆ ಇವರ ಒಟ್ಟು ಬರಹಗಳಲ್ಲೇ ವ್ಯಕ್ತವಾಗುವ ಧೋರಣೆಗಳು ಇವು. ಗ್ರಾಮೀಣ ಹಾಗೂ ಪಟ್ಟಣದ ಜಿಡ್ಡು ಗಟ್ಟಿದ ಮೌಲ್ಯಗಳು, ಪಿತೃ ಪ್ರಧಾನ ಸಂಸ್ಕೃತಿಯ ಮೌಲ್ಯಗಳು, ಜಾತಿಯ ಕಟ್ಟು — ನಿಟ್ಟುಗಳು, ಆಸ್ತಿ, ಆರ್ಥಿಕ ಸಂಬಂಧಗಳು ಪ್ರಭಾವಗಳು, ಹೆಣ್ಣಿನ ಬಗೆಗಿನ ಪ್ರಚಲಿತ ಮೌಲ್ಯಗಳ ಫಲ ಇವರ ಬರಹದ ಬಹುತೇಕ ಸ್ತ್ರೀಯರು, ವಾಸ್ತವದವರು. ನಾಯಕನ ಭಾವ ಪ್ರಪಂಚ ಅರ್ಥೈಸ ಹೊರಡುವ ದಾರಿಯಲ್ಲಿ ಇವರು ಸಮೀಕರಣದ ರೀತಿಯಲ್ಲಿ ಕಾಣಿಸಿಕೊಳ್ಳುತ್ತಾರೆಯೇ ಹೊರತು ಅವರ ಜೀವನದ ವಿವರಗಳಲ್ಲಿ ಪೂರ್ತಿಯಾಗಿ ದಕ್ಕುವುದಿಲ್ಲವಾದ್ದರಿಂದ, ಅನಂತಮೂರ್ತಿಯವರ ಸಾಹಿತ್ಯದ ಸ್ತ್ರೀ ಪಾತ್ರಗಳು ಅಪೂರ್ಣ ಪಾತ್ರಗಳೆಂದು ನಮಗನ್ನಿಸುತ್ತದೆ.

ಚಂಪಾವತಿ ಎಚ್. ಎಸ್.



"ಬಾಲೆ – ನೀ – ಸಬಲೆ"

ಯಾರು ಕಿತ್ತೊಯ್ದರು ಬಾಲೆ
ನಿನ್ನ ಕೆಂದುಟಿಯ ನಗೆಯ?
ಅದಾರು ಮೆತ್ತಿದರು ನಿನ್ನ
ಮನಸ್ಸಿಗೆ ತುಕ್ಕಿನ ಅಳಲ?

ಕೂತು ಕನಸ ಕಾಣದಿರು ನಲ್ಲೆ,
ನೀ, ಹಿಂದಿನಂತಲ್ಲ ಅಬಲೆ,
ಎಚ್ಚೆತ್ತು ನಿಲ್ಲು, ಒತ್ತು ನೆನಪಿನಾಳದ
ಕಂಪ್ಯೂಟರಿನ ಗುಂಡಿಗಳ,
ತೋರುವುದು ವಾಸ್ತವದಂಗಳದ;
ನಿನ್ನ ಸ್ವರೂಪದ ಚಿತ್ರಗಳ.

ಓ ಹೆಣ್ಣೆ ನೀನು ಸ್ಫೂರ್ತಿಯ ಸೆಲೆ
ಅಬಲೆಯಲ್ಲ ನೀ ಎಂದಿಗೂ ಸಬಲೆ.

ಕೆ. ಆರ್. ನಾಗರಾಜ್

ಏನೇನೋ ಆಯ್ತು

ಮಡಿಲಲ್ಲಿ
ಮಗುವಿರದಾಗ
ಮೊಲೆ ಹಾಲುಕ್ಕಿ
ಸುರಿದಂತಾಯ್ತು
ಸೆರೆಯೊಳಗಿನ ದೇವಕಿಯ
ಶೋಧನವಾಯ್ತು॥

ತಬ್ಬಲಿ ಕಂದ
ಕಿರುಬೆರಳ ಕಳಕೊಂಡು
ಕಗ್ಗತ್ತಲ ಖಂಡದಲಿ
ಕಂಗಾಣದೆ ಕೂಗಿದಂತಾಯ್ತು
ಅರಣ್ಯರೋಧವವಾಯ್ತು॥

ಅರ್ಜುನನ ಸ್ವಾರ್ಥಕ್ಕೆ
ದ್ರೋಣನ ತೃಪ್ತಿಗೆ
ಹೆಬ್ಬೆರಳ ಕಡಿದಿಟ್ಟ
ಪರಿಯಾಯ್ತು॥
ಹೆತ್ತಪ್ಪನ
ತುದಿನಾಲಿಗೆಗೆ ಸಿಲುಕಿದ
ನಚಿಕೇತನ ಪಾಡಾಯ್ತು
ಹೀಗೆ ಏನೇನೋ ಆಯ್ತು॥

ಪುರಾಣದ ಪುನರಾವರ್ತನೆಗಳೆಲ್ಲ
ಕಣ್ಮುಂದೆ ತೇಲಿಹೋಯ್ತು
ಬಾಳಿನ ಕಹಿ ಅನುಭವವಾಯ್ತು॥

ಕರಿಮೋಡ ಸುರಿಸುರಿದೂ
ಮತ್ತೆ ಬೆಳಗು
ಎಂದಿನಂತೇ ಆಯ್ತು॥
ಮೋಡವೇನೋ
ಬೆಳ್ಳಗೇ ಆಯ್ತು
ಆ ... ದ ... ರೇ
ವಸುಧೆಯ ಕೆಸರು
ಒಣಗುವಕಾಲ
ಇನ್ನು ... ಬಂದಿಲ್ಲ.

ಕಬಿನಿ ಹೇಮಾಶ್ರೀ

ಆರೋಗ್ಯ

ಔಷಧಿ ಸೇವಿಸುವಾಗ ಗರ್ಭಿಣಿ ಸ್ತ್ರೀಯರು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು

ಇಂದು ಔಷಧ ತಯಾರಿಸುವ ಕಾರ್ಖಾನೆಗಳು ಹೆಚ್ಚು ಲಾಭಾಧಾರಿತ ಹಾಗು ಅವು ಬಹುರಾಷ್ಟ್ರೀಯ ಸಂಸ್ಥೆಗಳ ಹಿಡಿತದಲ್ಲಿವೆ. ಇದರಿಂದಾಗಿ ಔಷಧಿಗಳು ಹೆಚ್ಚು ದುಬಾರಿಯಾಗಿರುತ್ತವೆ. ಎಷ್ಟೋ ಸಮಯ ಅನವಶ್ಯಕ ಔಷಧಿ, ಟಾನಿಕ್‌ಗಳು ಮಾರುಕಟ್ಟೆಗೆ ತಳ್ಳಲ್ಪಡುತ್ತವೆ. ಬಣ್ಣ ಬಣ್ಣದ ಜಾಹೀರಾತುಗಳ ಮೂಲಕ ಅವು ಮಾರಲ್ಪಡುತ್ತವೆ. ಔಷಧಿಗಳ ಬಗ್ಗೆ ಗ್ರಾಹಕರಿಗೆ ಜ್ಞಾನ ಮೂಡಿಸುವ ಯಾವ ಪ್ರಯತ್ನವೂ ನಡೆದಿಲ್ಲ. ಪರಿಣಾಮ, ದುಷ್ಪರಿಣಾಮಗಳ ಸರಿಯಾದ ಮಾಹಿತಿಯಿಲ್ಲದೆ ಮೂಗನೇ ಜಗತ್ತಿಗೆ ಔಷಧಿಗಳು ಮಾರಲ್ಪಡುತ್ತವ. ಸಿಗುವ ಅತಿಕಡಿಮೆ ಮಾಹಿತಿಯೂ ಸಹ ಸಣ್ಣ ಕಾಗದದ ಮೇಲೆ, ಅದೂ ಇಂಗ್ಲೀಷ್‌ನಲ್ಲಿರುತ್ತದೆ. ಎಷ್ಟು ಜನರಿಗೆ ಇಂಗ್ಲೀಷ್ ಭಾಷೆ ಬರುತ್ತದೆ?

ವೈದ್ಯರು ಸಹ ಸಣ್ಣ ಖಾಯಿಲೆಗಳಿಗೂ ದೊಡ್ಡ ಹೆಸರಿನ, ದುಬಾರಿ ಔಷಧಿಗಳನ್ನು ಬರೆದುಕೊಡುತ್ತಾರೆ. ನಾವು ಸಹ ವೈದ್ಯರು, ಔಷಧ ಕಾರ್ಖಾನೆಗಳು ಶಿಫಾರಸು ಮಾಡುವ ಅನೇಕ ಔಷಧಿಗಳನ್ನು ಸಂಪೂರ್ಣ ಒಪ್ಪಿಕೊಳ್ಳುತ್ತೇವೆ. ವೈದ್ಯರ ಬಳಿ ಹೋದಾಗ ಅವರು ದೊಡ್ಡ, ದುಬಾರಿ, ಔಷಧಿ, ಇಂಜೆಕ್ಷನ್ ನೀಡದಿದ್ದಲ್ಲಿ ವೈದ್ಯರಿಗೆ ಪರೀಕ್ಷೆ ಮಾಡಲು ಬರುವುದೇ ಇಲ್ಲವೆಂಬ ತೀರ್ಮಾನಕ್ಕೆ ಬರುತ್ತೇವೆ.

ಯಾವುದೇ ಔಷಧಿಯನ್ನು ತೆಗೆದುಕೊಳ್ಳಬೇಕಾದರೂ ಅದರಲ್ಲೂ ಗರ್ಭಿಣಿಯರು, ಅದರ ಪರಿಣಾಮಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಈ ರೀತಿಯ ಅರಿವನ್ನು ಬೆಳೆಸಿಕೊಂಡಾಗ ಅನೇಕ ಅಪಾಯಗಳನ್ನು ತಪ್ಪಿಸಬಹುದು. ಪ್ರತಿ ಸಲ ನಾವು ಔಷಧಿ ತೆಗೆದುಕೊಂಡಾಗ ಎರಡು ರೀತಿಯ ಪರಿಣಾಮಗಳಾಗುತ್ತವೆ. ಒಂದು ರೋಗ ಪರಿಹಾರಕ. ಅಂದರೆ ಔಷಧ ರೋಗವನ್ನು ನಿವಾರಿಸುತ್ತದೆ. ಅಥವಾ ರೋಗಕಾರಕ ಜೀವಾಣು ಹಾಗೂ ಸೂಕ್ಷ್ಮಾಣುಗಳನ್ನು ಕೊಲ್ಲುತ್ತದೆ. ಎರಡನೆಯದಾಗಿ ಔಷಧಿಯಿಂದಾಗುವ ದುಷ್ಪರಿಣಾಮ. ಇದು ತುಂಬಾ ಕಡಿಮೆ ಹಾಗು ಕಡೆಗಣಿಸುವಂತಹದಾಗಿರಬಹುದು ಅಥವಾ ಹೆಚ್ಚು ಆಪತ್ಕಾರಿಯಾಗಿರಬಹುದು. ಹಾಗು ದೇಹದ ಸ್ವಾಭಾವಿಕ ಕ್ರಿಯೆಯನ್ನೆ ನಿರ್ಬಂಧಿಸಬಹುದು.

ದೇಹದೊಳಗೆ ಸೇವಿಸುವ ಎಲ್ಲಾ ಔಷಧಿಗಳು ಉಪಯೋಗದ ನಂತರ ಮೂತ್ರಪಿಂಡ, ಯಕೃತ್ತು ಅಥವಾ ಕರುಳುಗಳ ಮೂಲಕ ಹೊರ ಹಾಕಲ್ಪಡುತ್ತದೆ. ಔಷಧಿಯ ಪರಿಣಾಮದ ನಂತರ ಅದನ್ನು ಹೊರಹಾಕಲು ಮೇಲಿನ ಮೂರು ಅಂಗಗಳು ಸ್ವಾಭಾವಿಕವಾಗಿ ಕೆಲಸ ಮಾಡುತ್ತಿರಬೇಕು.

ವೈಜ್ಞಾನಿಕ ರುಜುವಾತಿನಂತೆ, ಗರ್ಭಧರಿಸಿದಾಗ, ಹಾಲೂಡಿಸುತ್ತಿರುವಾಗ ಯಕೃತ್ತು, ಮೂತ್ರಪಿಂಡ ಹಾಗು ಇತರ ಅಂಗಗಳಿಗೆ ಔಷಧಿಯಲ್ಲಿನ ವಿಷದ ಅಂಶವನ್ನು ಪರಿಣಾಮಕಾರಿಯಾಗಿ ನಿಷ್ಪರಿಣಾಮಗೊಳಿಸಲು ಸಾಧ್ಯವಾಗುವುದಿಲ್ಲ. ಸಣ್ಣ ಮಗುವಿನ ದೇಹದ ಅಂಗಗಳೂ ಕೂಡ ಔಷಧಿಯನ್ನು ಸರಿಯಾಗಿ ಹೊರ ಹಾಕುಲು ಸರಿಯಾಗಿ ಬೆಳೆದಿರುವುದಿಲ್ಲ. ನಾವು ತೆಗೆದುಕೊಳ್ಳುವ ಬಹಳ ಔಷಧಿಗಳು ಸುಲಭವಾಗಿ ಪ್ಲಾಸೆಂಟಾ (ಮಾಸು) ದ ಮೂಲಕ ಹಾದು ಭ್ರೂಣದ ರಕ್ತವಾಹಿನಿಯನ್ನು ಸೇರುತ್ತದೆ. ಆಗ ಭ್ರೂಣದ ಮೇಲೂ ಸಹ ದುಷ್ಪರಿಣಾಮ ಉಂಟಾಗಬಹುದು. ಹಾಲೂಡಿಸುವ ತಾಯಂದಿರು ತೆಗೆದುಕೊಳ್ಳುವ ಔಷಧಿಗಳು ಹಾಲಿನ ಮೂಲಕ ಮಗುವಿನ ದೇಹಕ್ಕೆ ಸೇರಬಹುದು.

ಈ ಕಾರಣಕ್ಕಾಗಿ ವೈದ್ಯರು ನೀಡುವ ಔಷಧಿಗಳ ಪರಿಣಾಮ, ದುಷ್ಪರಿಣಾಮಗಳನ್ನು ಕೇಳಿ ತಿಳಿದುಕೊಳ್ಳಬೇಕು. ಔಷಧಿಗಳ ಬಗ್ಗೆ ಅರಿವು ಬೆಳೆಸಿಕೊಳ್ಳುವುದರಿಂದ ಹೆಚ್ಚಿನ ಅಪಾಯಗಳನ್ನು ತಡೆಗಟ್ಟಬಹುದು.

ಡಾ॥ ಶ್ಯಾಮಾನಾರಂಗ್

ಅನು : ಸರಸ್ವತಿ ದು.

ಸ್ತ್ರೀ ಮನಶಾಸ್ತ್ರದಲ್ಲಿ ಸಾಂಸ್ಕೃತಿಕ ಒತ್ತಡ

ಕ್ಲಾರಾ ಥಾಮ್ಸನ್ ಅವರು ಅಮೆರಿಕನ್ ಸಂಸ್ಕೃತಿಯಲ್ಲಿ ಸ್ತ್ರೀಯರ ಸ್ಥಾನಮಾನಗಳ ಬಗ್ಗೆ ಸಮೀಕ್ಷೆಯೊಂದನ್ನು ನಡೆಸಿದ್ದಾರೆ. ಅವರು ಫ್ರಾಯ್ಡ್‌ನ ಸ್ತ್ರೀಸಿದ್ಧಾಂತಗಳನ್ನು ಗಣನೆಗೆ ತೆಗೆದುಕೊಂಡು ಸಾಂಸ್ಕೃತಿಕ ಅಂಶಗಳ ದೃಷ್ಟಿಯಿಂದ ಸ್ತ್ರೀಯರ ಸಮಸ್ಯೆಗಳನ್ನು ಮಂಡಿಸಿದ್ದಾರೆ. ಸ್ತ್ರೀಯ ಮೂಲಸ್ಥಿತಿ ಹಾಗೂ ಬದಲಾಗುತ್ತಿರುವ ಸ್ಥಿತಿಯನ್ನು ಗುರುತಿಸಿರುವುದಲ್ಲದೆ, ಇತರ ಸಮಸ್ಯೆಗಳ ಕಡೆಗೂ ಗಮನವಿತ್ತಿದ್ದಾರೆ.

ಮನೋಬಲ ಕ್ರಿಯಾಶಾಸ್ತ್ರದ ಪ್ರಕಾರ, ಸಂಸ್ಕೃತಿಯು ವ್ಯಕ್ತಿತ್ವದ ಮೇಲೆ ತನ್ನದೇ ಆದ ಪ್ರಭಾವ ಬೀರುತ್ತದೆ. ಒಂದು ಸಂಸ್ಕೃತಿಯು ನಿರ್ದಿಷ್ಟ ನಡತೆಯನ್ನು ರೂಪಿಸುತ್ತದೆ, ಕರನ್ ಹಾರನೆ ಅವರು ಅಮೆರಿಕನ್ ಸಂಸ್ಕೃತಿಯಲ್ಲಿ ಸೂಕ್ಷ್ಮವೇದಿ ಪ್ರವೃತ್ತಿಗಳು ಸ್ತ್ರೀ ಪುರುಷರಿಬ್ಬರಲ್ಲೂ ಕಂಡುಬರುತ್ತದೆಂದು ತಿಳಿಸಿದ್ದಾರೆ. ಉದಾ : ಪ್ರೀತಿಸಲ್ಪಡಬೇಕೆಂಬ ಹಂಬಲ ಮತ್ತು ಮಹತ್ವಾಕಾಂಕ್ಷೆ. ಹೀಗಿದ್ದಾಗ್ಯೂ ಮೂಲತಃ ಸ್ತ್ರೀಯರ ಸಮಸ್ಯೆಗಳು ಪುರುಷರಿಂದ ಭಿನ್ನವಾಗಿದೆ. ಇದಕ್ಕೆ ಕಾರಣಗಳು ಹೀಗಿವೆ. ಮೊದಲನೆಯದು ಅಂಗರಚನೆಯಲ್ಲಿರುವ ವ್ಯತ್ಯಾಸ, ಎರಡನೆಯದು ಸಾಂಸ್ಕೃತಿಕ ಧೋರಣೆ. ಇವು ಸ್ತ್ರೀಗೆ ಸಮಸ್ಯೆಗಳನ್ನುಂಟುಮಾಡಿವೆಯೇ ವಿನಃ ಪುರುಷನಿಗಲ್ಲ. ರಜಸ್ವಲೆಯಾಗುವುದು, ಗರ್ಭಧರಿಸುವುದು, ಮತ್ತು ಋತುಬಂಧದ ತೊಡಕುಗಳು ಪುರುಷನಿಗಿಲ್ಲ, ಹೀಗಾಗಿ ಸ್ತ್ರೀಯ ಕೀಳರಿಮೆಗೆ ಅಂಗರಚನೆಯೇ ಕಾರಣವೆಂದು ಫ್ರಾಯ್ಡ್ ಅರ್ಥೈಸಿದ್ದಾನೆ. ಈ ಕಾರಣದಿಂದಾಗಿಯೇ ಸ್ತ್ರೀ ಅನೇಕ ಎಡರುತೊಡರುಗಳನ್ನು ಎದುರಿಸಬೇಕೆಂಬುದು ಫ್ರಾಯ್ಡ್‌ನ ಅಭಿಮತ. ಆದರೆ ಇದನ್ನು ಒಪ್ಪುವಂತಿಲ್ಲ.

ಫ್ರಾಯ್ಡ್‌ನು ಇತರ ಸಂಸ್ಕೃತಿಗಳಲ್ಲಿರುವ ಸ್ತ್ರೀಯರ ನಡತೆಯನ್ನು ಅಧ್ಯಯನಮಾಡಿಲ್ಲ. ಕೇವಲ ಪಾಶ್ಚಾತ್ಯ ಸಂಸ್ಕೃತಿಯ ಮಧ್ಯಮ ಮತ್ತು ಮೇಲು ವರ್ಗದ ಸ್ತ್ರೀಯರ ಬಗ್ಗೆ ಅಧ್ಯಯನ ಮಾಡಿದ್ದಾನೆ. ಇಲ್ಲಿ ಆತ ಸ್ತ್ರೀಯರ ಆಸಕ್ತಿ, ಆಕಾಂಕ್ಷೆ ಮತ್ತು ಧೋರಣೆಗಳನ್ನು ವಿಶ್ಲೇಷಿಸಿ, ಅಂಗರಚನೆಯ ಸ್ವಾಮ್ಯದಿಂದ ಅವುಗಳೇ ಎಲ್ಲ ಸಂಸ್ಕೃತಿಯ ಸ್ತ್ರೀಯರ ಆಸಕ್ತಿ, ಆಕಾಂಕ್ಷೆ ಮತ್ತು ಧೋರಣೆಗಳೆಂದು ಪರಿಗಣಿಸಿದ್ದಾನೆ. ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಸ್ತ್ರೀ ತನ್ನನ್ನು ಗುರುತಿಸಿಕೊಳ್ಳುವುದು ಸಹಜ. ಹಾಗೆಯೇ ಮಕ್ಕಳನ್ನು ಹಡೆಯುವುದು ಸ್ತ್ರೀಯ ವ್ಯಕ್ತಿತ್ವವನ್ನೆ ವೃದ್ಧಿಸುತ್ತದೆಂಬುದನ್ನು ಅಲ್ಲಗಳೆಯುವಂತಿಲ್ಲ. ಅಲ್ಲದೆ ಗರ್ಭಧರಿಸುವ ಸಾಧ್ಯತೆ, ಅಸಾಧ್ಯತೆಗಳು ಆಕೆಯ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ. ಉದಾ : ಸಂಭೋಗ ಕ್ರಿಯೆಯಲ್ಲಿ ಪುರುಷ ಉದ್ವಿಗ್ನನಾಗಲು ವಿಫಲನಾದರೆ ಅದನ್ನು ಬಹಿರಂಗಪಡಿಸಲು ಆತನಿಗೆ ಸಂಸ್ಕೃತಿಯ ಬೆಂಬಲವಿರುವಂತೆ ಸ್ತ್ರೀಗಿಲ್ಲ. ಇಲ್ಲಿ ದೈಹಿಕವಾಗಿ ಪುರುಷನ ಬೇಡಿಕೆಯನ್ನು ಈಡೇರಿಸಲು ಸಿದ್ಧಳಿದ್ದಲ್ಲಿ ಆಕೆಗೆ ಪುರುಷನ ಬಗ್ಗೆ ದ್ವೇಷ ಹಾಗೂ ತನ್ನ ಬಗ್ಗೆ ಕೀಳರಿಮೆ ಇರುವುದಿಲ್ಲ. ಆದರೆ ಇಲ್ಲಿಯೂ ಅಂಗರಚನೆಯ ಪಾತ್ರಕ್ಕಿಂತ ಸಾಂಸ್ಕೃತಿಕ ಒತ್ತಡವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಿದೆ.

ಅಮೆರಿಕಾದ ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯಗಳು ಬದಲಾಗುತ್ತಿವೆ. ಈ ಬದಲಾವಣೆಗಳು ಸ್ತ್ರೀಯರಿಗೆ ಅನುಕೂಲಕರವಾಗಿವೆ. ಆದರೆ ಪಿತೃಪ್ರಧಾನ ಪರಿಸರ ಹಾಕಿರುವ ಮಿತಿಯಲ್ಲೇ ಅವರು ತಮ್ಮ ಆಸಕ್ತಿಯನ್ನು ವೃದ್ಧಿಸಿಕೊಳ್ಳಬೇಕಾಗಿದೆ. ಬದಲಾದ ಪರಿಸ್ಥಿತಿಯಲ್ಲಿ ಮಹಿಳೆಯರು ಅಸಮಾನತೆಯ ಸ್ಪರ್ಧೆಗಿಳಿಯುವಂತಾಗಿದೆ. ಅಸಮಾನತೆ ಅಂದಾಕ್ಷಣ ಅಂಗರಚನೆಯಿಂದಾಗಿ ಅಲ್ಲ. ಪುರುಷರಿಗಿರುವ ಬೇಡಿಕೆ ಮತ್ತು ಘನತೆಯಿಂದ ಉಂಟಾಗಿರುವ ಅಸಮಾನತೆ.

ಅಮೆರಿಕನ್ ಸಂಸ್ಕೃತಿಯು ಸ್ತ್ರೀ ಪುರುಷನಿಗೆ ಸಮಾನಳಲ್ಲ ಎಂಬ ಅಧಿಕೃತ ಧೋರಣೆಯುಳ್ಳದ್ದು. ಈ ಧೋರಣೆಯಿಂದಾಗಿ, ಇತ್ತೀಚಿನವರೆಗೂ ಸ್ತ್ರೀಗೆ ಪುರುಷ ಸಮಕ್ಕೆ ಶಿಕ್ಷಣವಿರಲಿಲ್ಲ. ತಕ್ಕಮಟ್ಟಿನ ಶಿಕ್ಷಣ ಪಡೆದ ಬಳಿಕ ಅದರ ಪ್ರಯೋಜನ ಪಡೆಯಲು ಪುರುಷನಿಗಿರುವಷ್ಟೇ ಅವಕಾಶ ಆಕೆಗಿರಲಿಲ್ಲ. ಆಕೆಗೆ ನೌಕರಿ ಮಾಡಲು ಅನುಮತಿ ನೀಡುತ್ತಿರಲಿಲ್ಲ. ಇಂತಹ ಅಸಹಾಯಕ ಪರಿಸ್ಥಿತಿಯಿಂದಾಗಿ ಆರ್ಥಿಕವಾಗಿ ಪುರುಷ

ನನ್ನು ಅವಲಂಬಿಸುವುದೇ ಆಕೆಗಿದ್ದ ಆಯ್ಕೆಯಾಗಿತ್ತು. ಇಷ್ಟೇ ಅಲ್ಲದೆ, ಲೈಂಗಿಕ ಜೀವನಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮಿತಿಗಳನ್ನು ಹಾಕಲಾಗಿತ್ತು. ಈ ರೀತಿಯಾಗಿ ಸ್ತ್ರೀಗೆ ವಿಧಿಸಿದ ಕಟ್ಟುಪಾಡುಗಳು ಪುರುಷನಿಗೆ ಅನುಕೂಲಕರವಾಗಿ ಪರಿಣಮಿಸಿದವು.

ಇತ್ತೀಚಿನವರೆಗೂ ಸ್ತ್ರೀಯ ಕೀಳರಿಮೆಗೆ ಅಂಗರಚನೆಯೇ ಕಾರಣವಿರಬಹುದೆಂದು ಭಾವಿಸಿಕೊಂಡಿದ್ದ ಸಮಾಜದ ಧೋರಣೆಯನ್ನು ಸ್ತ್ರೀ ಪುರುಷರಿಬ್ಬರೂ ಒಪ್ಪಿಕೊಂಡಿದ್ದರು. ಕೀಳರಿಮೆಯ ಹಿನ್ನೆಲೆಯಲ್ಲಿಯೇ ಸ್ತ್ರೀಯನ್ನು ತರಬೇತಿಗೊಳಿಸುವುದರಿಂದ, ಬದಲಾಗುತ್ತಿರುವ ಮೌಲ್ಯಗಳ ಅರಿವಿದ್ದರೂ ಆಕೆ ತನ್ನನ್ನು ಸ್ವತಂತ್ರಗೊಳಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ, ಇಂತಹ ಸ್ಥಿತಿಯಲ್ಲಿರುವ ಸ್ತ್ರೀಯನ್ನು ಫ್ರಾಯ್ಡ್ ಗಮನಿಸಿರುವುದರಿಂದ, ಅಂಗರಚನೆಯ ವಾಸ್ತವಾಂಶದಿಂದ ಸಂಸ್ಕೃತಿಯ ಧೋರಣೆಯ ಪರಿಣಾಮಗಳನ್ನು ಸಾಮಾನ್ಯೀಕರಿಸಲು ಸಾಧ್ಯವಾಯಿತು. ಇದರಿಂದ ಆತನ ಸ್ತ್ರೀಸಿದ್ಧಾಂತಗಳನ್ನು ಸಮರ್ಥಿಸಿಕೊಳ್ಳುವಂತಿದ್ದರೂ, ಒಂದು ನಿರ್ಧಿಷ್ಟ ಸಂಸ್ಕೃತಿಯ ಹಿನ್ನೆಲೆಯಲ್ಲಿ ಆತ ಕಂಡ ಸ್ತ್ರೀಯನ್ನು ಪರಿಶೀಲಿಸುವುದು ಉಚಿತ.

ಫ್ರಾಯ್ಡ್‌ನ ಪ್ರಕಾರ ನರಗಳ ದೌರ್ಬಲ್ಯವಿರುವ ಹೆಚ್ಚಿನ ಸ್ತ್ರೀಯರ ಸಮಸ್ಯೆಗೆ ಕಾರಣ, ಲಿಂಗದ್ವೇಷ. ಇದನ್ನು ಸಾಂಕೇತಿಕವಾಗಿ ಒಪ್ಪಿಕೊಳ್ಳಬಹುದು, ಈ ಸಂಸ್ಕೃತಿಯಲ್ಲಿಯೇ ಸ್ತ್ರೀ ಅಂತಹ ಪರಿಸ್ಥಿತಿಗೊಳಪಡುವುದರಿಂದ ಪುರುಷನ ಬಗ್ಗೆ ಅಸೂಯೆ ಉಂಟಾಗುತ್ತದೆ. ಇದನ್ನು ಲಿಂಗದ್ವೇಷ ಎಂದು ಕರೆಯಬಹುದು. ಆದರಂತೆ ಹೆಣ್ಣು ಮಗು ಹದಿವಯಸ್ಸಿಗೆ ಕಾಲಿಡುತ್ತಿದ್ದಂತೆ ಸಂಸ್ಕೃತಿಯ ನಿರ್ಬಂಧಕ್ಕೆ ಒಳಪಡಬೇಕಾಗುತ್ತದೆ. ಆದುವರೆಗೂ ಲಿಂಗಭೇದವಿಲ್ಲದೆ ಸಮಾನತೆಯಿಂದ ವರ್ತಿಸುತ್ತಿದ್ದ ಆಕೆ ಋತುಮತಿಯಾಗುತ್ತಿದ್ದಂತೆಯೇ ಅಸಮಾನತೆಯ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ತತ್ಪರಿಣಾಮವಾಗಿ ಆಕೆ ತನ್ನ ಆಸೆ ಅನಿಸಿಕೆಗಳನ್ನು ಮನಬಿಚ್ಚಿ ವ್ಯಕ್ತಪಡಿಸುವಂತಿಲ್ಲ. ಇತರರೊಡನೆ ಸರಿಸಮಾನವಾಗಿ ಬೆರೆಯುವಂತಿಲ್ಲ. ಆಕೆಯ ಆಟ, ವಿದ್ಯಾಭ್ಯಾಸಕ್ಕೆ ಕಡಿವಾಣ ಹಾಕಲಾಗುತ್ತದೆ. ಒಟ್ಟಿನಲ್ಲಿ ಸ್ತ್ರೀತ್ವವನ್ನು ಅತ್ಯಂತ ಅಸಂತೋಷದಾಯಕವಾಗಿ ಪ್ರಾರಂಭಿಸಬೇಕಾಗಿತ್ತು. ಕಳೆದ ೫೦ ವರ್ಷಗಳಿಂದಾಗಿರುವ ಬದಲಾವಣೆಯನ್ನು ಗಮನಿಸಿದರೆ, ಸಂಸ್ಕೃತಿಯ ಧೋರಣೆಯಿಂದಾಗಿ ಅಂತಹ ಪರಿಸ್ಥಿತಿ ಸ್ತ್ರೀಗೆ ಬಂದೊದಗಿತೇ ವಿನಃ ಸ್ತ್ರೀತ್ವದಿಂದಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಸಾಂಸ್ಕೃತಿಕ ಧೋರಣೆಯಿಂದಾಗಿ ಸ್ತ್ರೀ ಲೈಂಗಿಕ ಜೀವನವನ್ನು ಕಡೆಗಣಿಸುವಂತಾಗಿತ್ತು. ಸ್ತ್ರೀತ್ವ ಲೈಂಗಿಕ ಕ್ರಿಯೆಗೆ ಸ್ಫೂರ್ತಿ. ಆದರೆ ಅದು ಆಕ್ರಮಣದ ಹಕ್ಕನ್ನು ನಿರ್ಬಂಧಿಸುವುದರಿಂದ, ಸ್ತ್ರೀ ಅತೃಪ್ತ ಜೀವನವನ್ನು ನಡೆಸಬೇಕಾಗಿತ್ತು. ಪುರುಷನಷ್ಟೇ ಸ್ತ್ರೀಗೂ ಲೈಂಗಿಕ ಜೀವನದ ಅಗತ್ಯವಿದೆಯೆಂಬುದನ್ನು ಅಲ್ಲಗಳೆಯುವ ಪ್ರವೃತ್ತಿ ಇನ್ನೂ ಇದೆ.

ಸ್ತ್ರೀ ಪುರುಷನನ್ನು ದ್ವೇಷಿಸಲು ಲೈಂಗಿಕ ಜೀವನವೇ ಕಾರಣವಲ್ಲ. ಆಕೆ ಆರ್ಥಿಕವಾಗಿ ಪುರುಷನನ್ನು ಅವಲಂಬಿಸುವ ಸ್ಥಿತಿ, ಬೌದ್ಧಿಕ ಹಾಗೂ ವೈಯುಕ್ತಿಕ ಬೆಳವಣಿಗೆಗೆ ಪ್ರೋತ್ಸಾಹವಿಲ್ಲದಿರುವುದು ನಿರಾಸೆಯನ್ನುಂಟು ಮಾಡಿದೆ. ಇಂತಹ ಸ್ಥಿತಿಯಿಂದಾಗಿ ಆಕೆಯಲ್ಲಿ ಉದ್ಭವಿಸುವ ಗುಣಗಳನ್ನು ಸ್ಥೂಲವಾಗಿ ಸ್ತ್ರೀತ್ವದ ಗುಣಗಳೆಂದು ಹಾಗೂ ಅವು ಅಂಗರಚನೆಯಿಂದಾಗಿ ಮೂಡುವ ಸ್ತ್ರೀ ಸ್ವಭಾವಗಳೆಂದು ಮನೋಬಲ ಶಾಸ್ತ್ರದ ಸಾಹಿತ್ಯ ತಿಳಿಸುತ್ತದೆ. ಹೀಗಾಗಿ ಸ್ತ್ರೀಯರು ಪುರುಷರಿಗಿಂತ ಅತಿ ನಿಷ್ಠೆಯುಳ್ಳವರು, ಹೆಚ್ಚು ಪ್ರೀತಿಯನ್ನು ಬಯಸುವವರು, ಆತ್ಮ ಶ್ಲಾಘನೆ ಮಾಡಿಕೊಳ್ಳುವವರು ಮತ್ತು ಅಶಕ್ತ ಮನಸ್ಸಿನವರೆಂದು ಭಾವಿಸಲಾಗಿದೆ,

ಅವಲಂಬಿತ ಸಂಬಂಧದಲ್ಲಿ ಪ್ರೀತಿ ರಕ್ಷಣೆ ನೀಡುತ್ತದೆ. ಸೂಕ್ಷ್ಮವೇದಿಗಳಿಗೆ ಪ್ರೀತಿ ರಕ್ಷಣೆಯ ದೃಷ್ಟಿಯಿಂದ ಅತಿ ಮುಖ್ಯ ಸಾಧನ, ನೈಸರ್ಗಿಕವಾಗಿ ಪ್ರೀತಿಸಲ್ಪಡುವುದು ಸ್ತ್ರೀಯಷ್ಟೇ ಪುರುಷನಿಗೂ ಅಗತ್ಯವಿರುತ್ತದೆ. ಆದರೆ ಅದು ಆಕೆಗೊಂದು ವೃತ್ತಿಯಾಗಿದೆ. ಇತ್ತೀಚಿನ ಹಾಗೂ ಇಂದಿನ ಸ್ತ್ರೀಯರ ಆರ್ಥಿಕ ಅಸಹಾಯಕತೆ ಮತ್ತು ವೈವಾಹಿಕ ಸಂಬಂಧವನ್ನು ಭದ್ರಗೊಳಿಸುವ ದೃಷ್ಟಿಯಿಂದ ಹಡೆಯುವ ಕ್ರಿಯೆಯು ಅಗತ್ಯವಾಗಿದೆ. ಹಿಂದೆ ವಿವಾಹದ ನಂತರ ದೈಹಿಕ ಆಕರ್ಷಣೆಯನ್ನು ಉಳಿಸಿಕೊಳ್ಳಲು ನಿರ್ಲಕ್ಷಿಸಲಾಗುತ್ತಿತ್ತು. ಆದರೆ ಇಂದಿನ ವಿಚ್ಛೇದನ ಪ್ರಕರಣಗಳಿಂದಾಗಿ, ಸ್ತ್ರೀಯ ಸ್ಥಾನಮಾನಗಳಿಗೆ ಧಕ್ಕೆ ಬರುವುದರಿಂದ ಹಾಗೂ ಜೀವನೋಪಾಯಕ್ಕೆ ಪುರುಷನನ್ನು ಆಶ್ರಯಿಸಬೇಕಾಗಿರುವುದರಿಂದ, ತನ್ನ ದೈಹಿಕ ಆಕರ್ಷಣೆಯನ್ನು ಉಳಿಸಿಕೊಳ್ಳಲು ಉಡುಗೆ ತೊಡಿಗೆಗಳಿಗೆ ಹೆಚ್ಚು ಗಮನಕೊಡುವಂತಾಗಿದೆ. ಹೀಗೆ ಆರ್ಥಿಕ

ಅಸಹಾಯಕತೆಯಿಂದಾಗಿ ಆಕೆ ಹೆಚ್ಚು ಪ್ರೀತಿಸಲ್ಪಡಬೇಕೆಂದು ಅಪೇಕ್ಷಿಸುತ್ತಾಳೆ.

ಫ್ರಾಯ್ಡ್‌ನು ಈಡಿಪಸ್‌ನ ಮನಃಪ್ರವೃತ್ತಿಯನ್ನು ಆಧಾರವಾಗಿಟ್ಟುಕೊಂಡು ಸ್ತ್ರೀಯರು ಪುರುಷರಿಗಿಂತ ದುರ್ಬಲ ಮನೋದಾರ್ಢ್ಯವುಳ್ಳವರೆಂದು ಹೇಳಿದ್ದಾನೆ. ಫ್ರಾಯ್ಡ್‌ನ ಜೊತೆಗೆ ಇತರ ಬರಹಗಾರರು, ಅದರಲ್ಲೂ ಷಚ್ಚನು ಸ್ತ್ರೀಯಲ್ಲಿ ದೃಢ ನಿಶ್ಚಯದ ಕೊರತೆ ಮತ್ತು ಮನೋದಾರ್ಢ್ಯಗಳ ಕೊರತೆ ಇರುವುದನ್ನು ಗುರುತಿಸಿದ್ದಾನೆ. ಆದರೆ ಅನೇಕ ಪುರುಷರನ್ನು ಪ್ರೀತಿಸಿದ ಸ್ತ್ರೀ ಕ್ರಮೇಣ ಮನೋದಾರ್ಢ್ಯವನ್ನು ಗಳಿಸಿಕೊಳ್ಳುತ್ತಾಳೆ. ಅಲ್ಲದೆ ಅವರ ಧೋರಣೆಗಳನ್ನು ಅಳವಡಿಸಿಕೊಂಡಿರುತ್ತಾಳೆ. ಅನೇಕ ಸ್ತ್ರೀಯರು ಇಂತಹ ವರ್ಣನೆಗೆ ಅರ್ಹರಾಗಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಅಮೆರಿಕನ್ ಸಂಸ್ಕೃತಿಯಲ್ಲಿ ಈ ರೀತಿಯ ಪ್ರವೃತ್ತಿ ಸ್ತ್ರೀಯರಲ್ಲಿ ಮಾತ್ರವಲ್ಲ, ಪುರುಷರಲ್ಲೂ ಕಂಡುಬರುತ್ತದೆ.

ತನ್ನನ್ನು ಸ್ವತಂತ್ರಗೊಳಿಸಿಕೊಳ್ಳಲು ತನಗನುಕೂಲವಾದ ಸಿದ್ಧಾಂತಕ್ಕೆ ಮೊರೆ ಹೋಗುವುದು ಸುಲಭ. ಆದರೆ ಸಾಂಸ್ಕೃತಿಕ ಕಾರಣಗಳಿಂದಾಗಿ ಸ್ತ್ರೀಗೆ ಬಾಲ್ಯದಲ್ಲಿ ತಂದೆಯ ಆಶ್ರಯ ಅಗತ್ಯ. ಇದರಿಂದ ವಿಮುಕ್ತಳಾಗಲು ಪ್ರೋತ್ಸಾಹಿಸುತ್ತಿರಲಿಲ್ಲ. ಆಕೆಯನ್ನು ಮತ್ತೊಬ್ಬ ಪುರುಷನ ರಕ್ಷಣೆಗೆ ಸುರಕ್ಷಿತವಾಗಿ ಒಪ್ಪಿಸುವವರೆಗೂ ಆಕೆ ತಂದೆಯ ಆಶ್ರಯದಿಂದ ಸ್ವತಂತ್ರಳಾಗಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಸ್ಥಿತಿ ಸ್ವತಂತ್ರ ಬೆಳವಣಿಗೆಗೆ ಅನುಕೂಲಕರವಾಗಿರಲಿಲ್ಲ. ಹೀಗಿದ್ದಾಗ್ಯೂ ಕೆಲವು ಸ್ತ್ರೀಯರು ಸ್ವತಂತ್ರವಾಗಿ ಬೆಳವಣಿಗೆ ಹೊಂದಿದುದು ಗಮನಾರ್ಹ.

ಫ್ರಾಯ್ಡ್‌ನ ಮತ್ತೊಂದು ಹೇಳಿಕೆಯಂತೆ ಸ್ತ್ರೀಯರು ಪುರುಷರಿಗಿಂತ ಹೆಚ್ಚು ಕಟ್ಟುನಿಟ್ಟಿನವರು, ಬಹುಬೇಗನೆ ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ. ಇದನ್ನು ೩೦ ವರ್ಷ ದಾಟಿದ ಸ್ತ್ರೀ ಪುರುಷರ ಬೆಳವಣಿಗೆಯ ಸಾಧ್ಯತೆ, ಅಸಾಧ್ಯತೆಗಳಿಗೆ ಸಂಬಂಧಿಸಿದಂತೆ ಹೇಳಿದ್ದಾನೆ. ಸ್ತ್ರೀತ್ವ ಸಾಧ್ಯವಾದ ರೀತಿಯಲ್ಲಿ ಶಕ್ತಿಯನ್ನು ಕಳೆದುಕೊಳ್ಳುವುದರಿಂದ ಲೈಂಗಿಕ ಬೆಳವಣಿಗೆ ಸಾಧ್ಯವಾಗುವುದಿಲ್ಲ ಎಂಬ ಹಿನ್ನೆಲೆಯಲ್ಲಿ ತನ್ನ ಹೇಳಿಕೆಯನ್ನು ಮುಂದಿಟ್ಟಿದ್ದಾನೆಯೇ ವಿನಃ ಅದನ್ನು ಸರಿಯಾಗಿ ವಿವರಿಸಿಲ್ಲ. ಇದು ಸ್ತ್ರೀಯ ಲೈಂಗಿಕಾಕರ್ಷಣೆ ಪುರುಷನಿಗಿಂತ ಕಡಿಮೆ ಅವಧಿಯುಳ್ಳದ್ದು, ಆಕೆ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಬೇಗನೆ ಪ್ರೌಢಳಾಗುತ್ತಾಳೆಂಬುದನ್ನು ನಂಬುವಂತೆ ಮಾಡುತ್ತದೆ. ಇಲ್ಲಿಯೂ ಸಾಂಸ್ಕೃತಿಕಾಂಶಗಳೇ ಪ್ರಧಾನ ಪಾತ್ರವಹಿಸುತ್ತವೆ. ಎಲ್ಲಿಯವರೆಗೆ ವೈವಾಹಿಕ ಜೀವನದ ಏಕೈಕ ಯಶಸ್ಸು ಎಂಬುದಿರುತ್ತದೆಯೋ ಅಲ್ಲಿಯವರೆಗೆ ಆಕೆ ೩೦ ವರ್ಷಕ್ಕೆ ಜೀವನವನ್ನು ರೂಪಿಸಿಕೊಳ್ಳುವಳು ಇಲ್ಲವೇ ಕಳೆದುಕೊಳ್ಳುವಳು. ಈಗಲೂ ಅನೇಕ ಪರಿಸರದಲ್ಲಿ ೩೦ ವರ್ಷ ದಾಟಿದ ಸ್ತ್ರೀಗೆ ಭವಿಷ್ಯವಿಲ್ಲ. ಆದರೆ ಮನೋಬಲ ಶಾಸ್ತ್ರದ ಪ್ರಕಾರ ವ್ಯಕ್ತಿಯ ಬೆಳವಣಿಗೆಗೆ ಅವಕಾಶಗಳು ನಂತರದಲ್ಲೂ ಇದೆ. ೩೦ ವರ್ಷದೊಳಗೆ ಪುರುಷರಿಗೂ ಅವಕಾಶಗಳ ಕೊರತೆ, ತರಬೇತಿಯಿಲ್ಲದಿರುವಿಕೆ, ಕುಂಠಿತಗೊಂಡ ಮಾನಸಿಕ ಬೆಳವಣಿಗೆಯಿಂದಾಗಿ ತಮ್ಮ ವ್ಯಕ್ತಿತ್ವದ ಪರಾಕಾಷ್ಠೆಯನ್ನು ತಲುಪಲು ಸಾಧ್ಯವಾಗುವುದಿಲ್ಲ. ಮಿಗಿಲಾಗಿ ಇಂದು ಅನೇಕ ಸ್ತ್ರೀಯರು ತಮ್ಮ ರಕ್ಷಣೆಗಾಗಿ ಲೈಂಗಿಕ ಮೌಲ್ಯಕ್ಕೆ ಮಣಿಯದೆ, ಸಾಮರ್ಥ್ಯದಿಂದ ಜೀವನ ನಿರ್ವಹಿಸಿದ ನಿದರ್ಶನಗಳಿವೆ. ಒಟ್ಟಿನಲ್ಲಿ ಸ್ತ್ರೀಯರ ಆರ್ಥಿಕ ಅವಲಂಬನ ಹಾಗೂ ಅವಕಾಶಗಳ ಕೊರತೆ ಪರಸ್ಪರರಲ್ಲಿ ಕಟ್ಟುನಿಟ್ಟಿನ ಮತ್ತು ಸೀಮಿತ ದೃಷ್ಟಿಯನ್ನು ಹೊಂದಲು ಎಡೆಮಾಡಿಕೊಟ್ಟಿದೆಯೆಂದು ಖಚಿತವಾಗಿ ಹೇಳಬಹುದು.

ಹೀಗೆ ಸಾಂಸ್ಕೃತಿಕ ಒತ್ತಡಕ್ಕೆ ಮಣಿದು ಸ್ತ್ರೀಯ ನಡತೆ ರೂಪುಗೊಳ್ಳುತ್ತದೆಯೇ ವಿನಃ ಫ್ರಾಯ್ಡ್ ವಿವರಿಸಿದಂತೆ ಆಕೆಯ ಅಂಗರಚನೆಯ ಹಿನ್ನೆಲೆಯಲ್ಲ. ಆಕೆಗೆ ಲಿಂಗವೇ ಇಲ್ಲ ಎಂಬುದರ ಪರಿಣಾಮದಿಂದಲ್ಲ, ಎಂಬುದನ್ನು ಇದುವರೆಗಿನ ಚರ್ಚೆಯಿಂದ ಕಂಡುಕೊಳ್ಳಬಹುದು. ಅಂಗರಚನೆಯ ಹಿನ್ನೆಲೆಯಲ್ಲಿ ಆಕೆ ಆರ್ಥಿಕವಾಗಿ ಪುರುಷನನ್ನು ಅವಲಂಬಿಸುತ್ತಾಳೆಂಬುದು ಆಧಾರವಿಲ್ಲದ್ದು.

ಫ್ರಾಯ್ಡ್‌ನ ಸಿದ್ಧಾಂತಗಳು ರೂಪುಗೊಂಡದ್ದು ವಿಕ್ಟೋರಿಯಾ ರಾಣಿಯ ಕಾಲದಲ್ಲಿ. ಅದಕ್ಕೆ ತದ್ವಿರುದ್ಧವಾಗಿ ಕ್ಲಾರಾ ಥಾಮ್ಸನ್ ಅವರು ಇಂದಿನ ಸ್ತ್ರೀಯನ್ನು ಕುರಿತು ಚರ್ಚಿಸಿದ್ದಾರೆ. ಇಂದಿನ ಪರಿಸ್ಥಿತಿಯಲ್ಲೂ ಸಾಂಸ್ಕೃತಿಕಾಂಶಗಳ ಪ್ರಭಾವವನ್ನು ಗುರುತಿಸಿದ್ದಾರೆ. ಬದಲಾದ ಸ್ಥಿತಿಯಲ್ಲಿ ಸ್ತ್ರೀಗೆ ಲೈಂಗಿಕ ಇತಿಮಿತಿಗಳಿಲ್ಲ. ಸ್ವ-ಬೆಳವಣಿಗೆಗೆ ಅವಕಾಶ

ಗಳು ಹೆಚ್ಚಾಗಿವೆ. ವಿವಾಹ ಆರ್ಥಿಕ ಭದ್ರತೆಗೆ ಸಾಧನವಾಗಿಲ್ಲ. ಇವೇ ಆಕೆಯ ನಡತೆಯನ್ನು ರೂಢಿಸಿವೆ. ಫ್ರಾಯ್ಡ್ ಕಂಡ ಸ್ತ್ರೀಗೆ ಬದಲಾಗಿ ಸಾಮರ್ಥ್ಯವುಳ್ಳ ಸ್ವತಂತ್ರ ಪ್ರವೃತ್ತಿಯ ಸ್ತ್ರೀಯರು ಕಂಡು ಬರುತ್ತಿದ್ದಾರೆ. ಇದು ಸ್ಥಿತ್ಯಂತರ ಕಾಲವಾದ್ದರಿಂದ, ಅವಲಂಬಿಗಳಿಗೆ ಸಾಂಸ್ಕೃತಿಕ ಬದಲಾವಣೆಯನ್ನು ಅಳವಡಿಸಿಕೊಳ್ಳಲು ಹೆಚ್ಚಿನ ಸಮಯ ಬೇಕು. ಆದ್ದರಿಂದಲೇ ಹೆಚ್ಚಿನ ಸ್ತ್ರೀಯರಲ್ಲಿ ಹಳೆಯ ಧೋರಣೆಗಳೇ ಉಳಿದಿವೆ. ಉದಾ: ಸ್ತ್ರೀ ಸ್ತ್ರೀಯಂತಿರಬೇಕಾದರೆ ವಿವಾಹವಾಗುವುದು ಮತ್ತು ಪುರುಷನನ್ನು ಅವಲಂಬಿಸುವುದೇ ಸರಿಯೆಂಬುದು ಹಲವರ ಅಭಿಪ್ರಾಯ. ಕೆಲವರಿಗೆ ವಿವಾಹ ಮತ್ತು ಆರ್ಥಿಕ ಅವಲಂಬಿತ್ವ ಅಥವ ಆರ್ಥಿಕ ಸ್ವಾತಂತ್ರ್ಯ ಮತ್ತು ಅವಿವಾಹಿತರಾಗಿರುವುದರ ಬಗ್ಗೆ ಘರ್ಷಣೆಯನ್ನುಂಟು ಮಾಡಿದೆ. ಇನ್ನು ಸಂಪ್ರದಾಯ, ಘನತೆಯ ಪ್ರಭಾವಕ್ಕೊಳಪಟ್ಟ ಸ್ತ್ರೀಯರಿಗೆ ವಿವಾಹ, ಮಕ್ಕಳ ಲಾಲನೆ ಪಾಲನೆ ಹಾಗೂ ಸ್ವಬೆಳವಣಿಗೆ ಒಂದಕ್ಕೊಂದು ಹೊಂದುವಂತಹದ್ದಲ್ಲ ಎಂಬ ಧೋರಣೆ ಇದೆ. ಆದರೆ ಪುರುಷರಿಗೆ ಅಂತಹ ಸಂಪ್ರದಾಯಗಳಿಲ್ಲದ್ದರಿಂದ, ಸಾಮಾನ್ಯವಾಗಿ ಅವರ ಎರಡು ಬಗೆಯ ಆಸಕ್ತಿಗಳು ಒಂದನ್ನೊಂದು ಬಲಪಡಿಸುತ್ತವೆ. ಇದೇ ಸ್ತ್ರೀ ಪುರುಷನನ್ನು ದ್ವೇಷಿಸಲು ಆಧಾರವಾಗಿದೆ.

ಅಮೆರಿಕಾದ ಸಂಸ್ಕೃತಿಯಲ್ಲಿ ಸ್ತ್ರೀ ಪುರುಷನನ್ನು ದ್ವೇಷಿಸಲು ಫ್ರಾಯ್ಡ್ ಹೇಳಿರುವಂತೆ ಆಕೆಗೆ ಲಿಂಗವಿಲ್ಲವೆಂಬುದು ಸಾಂಕೇತಿಕವಾಗಿ ಸತ್ಯ. ಪುರುಷನಿಗಿರುವ ಸ್ವಾತಂತ್ರ್ಯವನ್ನು, ಅವಕಾಶವನ್ನು ಆಕೆ ದ್ವೇಷಿಸುತ್ತಾಳೆ. ಈ ದ್ವೇಷ ಉಲ್ಬಣಿಸಿದಾಗ ಪುರುಷ ಸ್ತ್ರೀಯ ಶತ್ರುವಾಗುತ್ತಾನೆ. ಫ್ರಾಯ್ಡ್‌ನ ಲಿಂಗದ್ವೇಷ ರೋಗ ಲಕ್ಷಣದ ಪ್ರಕಾರ, ಸ್ತ್ರೀ ಪುರುಷನನ್ನು ದಮನಮಾಡುವ ಲಕ್ಷಣಗಳುಳ್ಳ ಗುಣಗಳನ್ನು ಹೊಂದಿರಲು ಹಾರೈಸುತ್ತಾಳೆ.

ಫ್ರಾಯ್ಡ್‌ನು ಲಿಂಗದ್ವೇಷಕ್ಕೆ ಸೂಚಿಸಿರುವ ಪರಿಹಾರಗಳು ಹೀಗಿವೆ. ಸ್ತ್ರೀ ತನ್ನ ಸ್ತ್ರೀತ್ವದ ಪಾತ್ರವನ್ನು ಒಪ್ಪಿಕೊಳ್ಳುವುದು; ನರಗಳ ದೌರ್ಬಲ್ಯ ಬೆಳೆಸಿಕೊಳ್ಳುವುದು, ಪುರುಷ ಲಕ್ಷಣಗಳುಳ್ಳ ನಡತೆ ಬೆಳೆಸಿಕೊಳ್ಳುವುದು. ಇವುಗಳಲ್ಲಿ ಮೊದಲನೆಯದು "ಸಾಮಾನ್ಯ ಪರಿಹಾರ" ಎಂಬುದು ಆತನ ಅಭಿಪ್ರಾಯ.

... ಬೆಳೆಸಿಕೊಳ್ಳುವ

ಪರಿಹಾರವು ಗಮನಾರ್ಹವಾಗಿದೆ. ಸ್ತ್ರೀಗೆ ಸ್ವಂತಿ... ಯಿಲ್ಲದಿರುವುದರಿಂದ ಆಕೆ ಪುರುಷನನ್ನು ಅನುಕರಿ... ಬೇಕು. ಆದರೆ ಪುರುಷನ ರೀತಿ ನೀತಿಗಳನ್ನು ಅಳ... ಡಿಸಿಕೊಳ್ಳುವುದರಿಂದ ಆಕೆಗೆ ಎಷ್ಟರಮಟ್ಟಿಗಿನ ಲಾ... ವಿದೆಯೆಂಬುದನ್ನು ಗಮನಿಸುವಂತಿದೆ. ಈ ತೆರನಾ... ನಡತೆಯಿಂದ ಎಷ್ಟರಮಟ್ಟಿಗೆ ತನ್ನ ಗುರಿ ಮುಟ್ಟ... ಹುದು, ಇದರಿಂದಾಗಿ ಅಂಗರಚನೆಯ ಹಿನ್ನೆಲೆಯ... ಪುರುಷನ ನಡತೆ ಮತ್ತು ಜೀವನಕ್ರಮವನ್ನು ಅನಿವಾ... ರ್ಯವಾಗಿ ಪರಿಗಣಿಸುವಂತಿದೆ. ಇಲ್ಲಿ ಸ್ತ್ರೀ ಸ್ವಭಾ... ವನ್ನು ಗಣನೆಗೆ ತೆಗೆದುಕೊಳ್ಳುವಷ್ಟೇ ಕಷ್ಟ ಅಂಗ... ಚನೆ ಮತ್ತು ಸಾಂಸ್ಕೃತಿಕಾಂಶಗಳನ್ನು ಪ್ರತ್ಯೇಕಿಸುವು... ರಲ್ಲಿದೆ. ಉದಾ: ಇತ್ತೀಚಿನವರೆಗೂ ವೈದ್ಯ ವೃತ್ತಿ... ಯನ್ನು ಕೈಗೊಳ್ಳುವ ಸ್ತ್ರೀಯರ ನಿರ್ಧಾರವನ್ನು ಪುರು... ಲಕ್ಷಣವೆಂದು ಪರಿಗಣಿಸಲಾಗುತ್ತಿತ್ತು. ಮನೆಯ ಹೊ... ರಗೆ ನಾಯಕತ್ವ ವಹಿಸುವ ಕೆಲಸಗಳೆಲ್ಲವೂ ಪುರು... ನದ್ದು ಎಂಬ ನಂಬಿಕೆಯೇ ಈ ರೀತಿಯ ಅಭಿ... ಪ್ರಾಯ ಕುದುರುವಂತೆ ಮಾಡಿತ್ತು.

ಇಂದು ಸ್ತ್ರೀಯರು ಪುರುಷರ ಸಮಕ್ಕೆ ಎಲ್ಲಾ... ರಂಗಗಳಿಗೂ ಪ್ರವೇಶಿಸುತ್ತಿದ್ದಾರೆ. ಹೀಗಾಗಿ ವ್ಯಾ... ಹಾರಿಕವಾಗಿ ಪುರುಷ ಲಕ್ಷಣಗಳಾದ ಆಕ್ರಮಣ, ನಿಷ್ಟ... ಷ್ಟವಾದ ನಡತೆ, ಎದೆಗಾರಿಕೆಯ ಗುಣಗಳನ್ನು ಸ್ತ್ರೀ ಅ... ವಡಿಸಿಕೊಂಡರೆ ಪರಿಣಾಮಕಾರಿಯಾಗಿರುತ್ತದೆ. ಸ್ತ್ರೀ... ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯದ ಪ್ರಭಾ... ದಿಂದಾಗಿ ಉಲ್ಲೇಖಿತ ಗುಣಗಳನ್ನು ಬೆಳೆಸಿಕೊಳ್ಳುತ್ತಿ... ದ್ದಾರೆ. ಈ ಗುಣಗಳು ಪುರುಷ ಲಕ್ಷಣವಿರು... ಸ್ತ್ರೀಯರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಆದ್ದ... ಸ್ವತಂತ್ರ ಸ್ತ್ರೀಯನ್ನು, ಪುರುಷ ಲಕ್ಷಣವುಳ್ಳ ಸ್ತ್ರೀ... ಎಂದು ಅರ್ಥೈಸಿಕೊಳ್ಳುವುದು ಸರಿಯಲ್ಲ.

ಅಮೆರಿಕನ್ ಸಂಸ್ಕೃತಿಯಲ್ಲಿ ಸ್ತ್ರೀ ಪುರುಷನಂ... ರುವ ನಡತೆಯನ್ನು ಬೆಳೆಸಿಕೊಳ್ಳಬಹುದು. ಸ್ವ–ಬೆ... ವಣಿಗೆಯಲ್ಲಿ ಎದುರಾಗುವ ಸಮಸ್ಯೆಗಳನ್ನೆದುರಿಸಲ... ಸಂಸ್ಕೃತಿಯ ರಕ್ಷಣೆಯನ್ನು ಪಡೆಯಬಹುದು, ... ರೀತಿಯ ನಡತೆಯಿಂದಾಗಿ, ತನಗರಿವಿಲ್ಲದಂತೆ ತನ್ನನ್ನು... ಪುರುಷನೆಂದು ಪರಿಗಣಿಸಿಕೊಂಡಿರುವುದರಿಂದ, ಸ್ತ್ರೀ... ದುದಕ್ಕಾಗಿ ಅತೃಪ್ತಿಯಿಂದಿದ್ದಾಳೆ. ಏಕೆಂದರೆ ಸ್ತ್ರೀ ಅ... ದಾಕ್ಷಿಣ್ಯ ಕೀಳರಿಮೆ ಹೊಂದಿರುವುದು, ಪರರ ಆಶ್ರಯ... ದಲ್ಲಿರಬೇಕಾದ ಸ್ಥಿತಿ, ತನ್ನತನವನ್ನು ಕಡೆಗಾ... ಸುವುದು, ಸ್ವತಂತ್ರ ವ್ಯಕ್ತಿಯಾಗುವ ಅವಕಾಶದಿಂ...

ವಂಚಿತಳಾಗಿರುವುದೆಂದು ಭಾವಿಸಲಾಗಿದೆ. ಹೀಗಾಗಿ ಸ್ತ್ರೀಯಾಗಿರುವುದಕ್ಕಿಂತ ಸ್ವತಂತ್ರ ವ್ಯಕ್ತಿಯಾಗಿರಲು ಪ್ರಯತ್ನಿಸುತ್ತಾಳೆ. ಇನ್ನು ಪುರುಷ ಲಕ್ಷಣಗಳುಳ್ಳ ಸ್ತ್ರೀ ಅತಿಯಾದ ಸ್ವಾತಂತ್ರ್ಯದ ಅಗತ್ಯವನ್ನು ಮತ್ತು ಅಕ್ರಮ ಸಂಬಂಧದ ಭೀತಿಯನ್ನು ಹೊಂದಿದ್ದಾಳೆ.

ಹೀಗೆ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡ ಸ್ತ್ರೀಯರಿಗೆ ಅವಲಂಬಿತ್ವದ ಭೀತಿ ಇದೆ. ಅಂತಹವರು ಪತಿಯ ವಿರುದ್ಧ ಸೇಡಿನ ಮನೋಭಾವ ಹೊಂದಲಾರರು. ವಿವಾಹದ ನಂತರವೂ ಸ್ವತಂತ್ರರಾಗಿದ್ದು, ಭಾಗಶಃ ಬೆಂಬಲಿಸುವಂತಿದ್ದರೆ ವೈವಾಹಿಕ ಸಂಬಂಧದ ಜೀವನವನ್ನು ಯಶಸ್ವಿಗೊಳಿಸಿಕೊಳ್ಳುತ್ತಾರೆ.

ಅಂಗರಚನೆಯ ಕೊರತೆ ಹಾಗೂ ಸಾಂಸ್ಕೃತಿಕ ಕೀಳರಿಮೆಯಿಂದಾಗಿ ಪುರುಷ ಲಕ್ಷಣವು ಬೆಳವಣಿಗೆಯಾಗದೆ, ಮತ್ತೊಬ್ಬರನ್ನು ಆಶ್ರಯಿಸುವ ಸಂದರ್ಭದಲ್ಲಿ ಬೆಳವಣಿಗೆಯಾದಲ್ಲಿ, ಪುರುಷನಂತಿರುವ ಅಪೇಕ್ಷೆಯಿದ್ದರೂ ಪುರುಷನನ್ನು ದ್ವೇಷಿಸುವುದೇಕೆ? ಏಕೆಂದರೆ ಸಾಮಾನ್ಯವಾಗಿ ಸಾಂಸ್ಕೃತಿಕವಾಗಿ ಅಂತಹ ಧೋರಣೆಯಿಂದ ಪ್ರಯೋಜನವಿದೆ. ತನ್ನ ಕಾಲದವರಂತೆ ತಾನು ಸ್ವತಂತ್ರಳಾಗಿರಬೇಕೆಂಬ ಭ್ರಮೆ ಆಕೆಯಲ್ಲಿ ಅಂತಹ ಪ್ರಗತಿಪರ ಧೋರಣೆಗೆ ಎಡೆಮಾಡಿಕೊಡುತ್ತದೆ. ಎರಡನೆಯದಾಗಿ, ಅವಲಂಬಿತನದಲ್ಲಿ ನರಳಿದುದರಿಂದ ಪುರುಷನೊಡನಿದ್ದ ನಿಕಟತೆಯನ್ನು ತಡೆಯಲು ಅದು ಸಾಧನವಾಗಿರುತ್ತದೆ. ಹೀಗೆ ಪುರುಷ ದ್ವೇಷಕ್ಕೆ ಪರಿಹಾರ ಪುರುಷ ಲಕ್ಷಣ ಬೆಳೆಸಿಕೊಳ್ಳುವುದಾಗಿದೆ.

ಕೊನೆಯದಾಗಿ, ಮನೋವಿಶ್ಲೇಷಣಕಾರರು ಒಂದು ಸಂಸ್ಕೃತಿಯ ಸ್ತ್ರೀಯ ಮನಶಾಸ್ತ್ರವನ್ನು ಪರಿಚಯಿಸಿದ್ದಾರೆಂದೇ ಹೇಳಬಹುದು. ಫ್ರಾಯ್ಡ್‌ನು ಪಾಶ್ಚಾತ್ಯ ರಾಷ್ಟ್ರಗಳ ಒಂದು ಭಾಗದಲ್ಲಿ ಗಮನಿಸಿದ ಸಂಗತಿಗಳಲ್ಲ, ಅಂಗರಚನೆಯ ಅಂಶವನ್ನೆ ಸ್ತ್ರೀ ನಿಟ್ಟಾತನವನ್ನು ಮಂಡಿಸಲು ಹಾಗೂ ಸಾಮಾನ್ಯವಾಗಿ ಸ್ತ್ರೀ ಮನಶಾಸ್ತ್ರವನ್ನು ಅರ್ಥಮಾಡಿಕೊಳ್ಳಲು ಆಧಾರವನ್ನಾಗಿಸಿಕೊಂಡಿದ್ದನು. ಫ್ರಾಯ್ಡ್‌ನು ಗಣನೆಗೆ ತೆಗೆದುಕೊಂಡ ಸ್ತ್ರೀಯರ ಸ್ಥಿತಿ ಹೀಗಿತ್ತು ಎಂಬುದರ ಬಗ್ಗೆ ಅರಿವನ್ನುಂಟುಮಾಡುತ್ತದೆ.

ಎಚ್.. ಎಸ್. ಉಷಾರಾಣಿ

ಸ್ತ್ರೀ ಸಾಹಿತ್ಯದಲ್ಲಿ ಪೌರಾಣಿಕ ಮತ್ತು ಚಾರಿತ್ರಿಕ ಪ್ರತೀಕಾನ್ವೇಷಣೆ

'ದಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್' 21 ಡಿಸೆಂಬರ್ 89 ರಂದು 'ಶ್ರೀಮತಿ ಕಾಮೇಶ್ವರಮ್ಮ ಕುಪ್ಪುಸ್ವಾಮಿ ಸ್ಮಾರಕ ಉಪನ್ಯಾಸ' ಏರ್ಪಡಿಸಿದ್ದರು. ಇದರಲ್ಲಿ "ಆಧುನಿಕ ಸ್ತ್ರೀ ಸಾಹಿತ್ಯದಲ್ಲಿ ಪೌರಾಣಿಕ ಮತ್ತು ಚಾರಿತ್ರಿಕ ಪ್ರತೀಕಾನ್ವೇಷಣೆ" ಬಗ್ಗೆ ಮಾತನಾಡಿದವರು ಶ್ರೀಮತಿ ವಿಜಯಾದಬ್ಬೆ. "ಮಹಿಳಾ ಲೇಖಕಿಯರು ತಮ್ಮ ಒಳತೋಟಿ, ಸಮಸ್ಯೆ, ತುಡಿತಗಳನ್ನು ಸಮಾಜದ ಮುಂದಿಡಲು ಪೌರಾಣಿಕ ಹಾಗೂ ಚಾರಿತ್ರಿಕ ವಸ್ತುಗಳನ್ನು ಬಳಸಿಕೊಂಡಿದ್ದಾರೆ. ಪೌರಾಣಿಕ — ಚಾರಿತ್ರಿಕ ವಲಯಗಳಲ್ಲಿ ಮಹಿಳೆಯರ ಅನ್ವೇಷಣೆ ಮಹಿಳಾವಾದಿ ಅನ್ವೇಷಣೆಯೂ ಹೌದು. ಮಹಿಳಾ ಎಚ್ಚರಕ್ಕೆ ಅನುಗುಣವಾಗಿ ಪೌರಾಣಿಕ— ಚಾರಿತ್ರಿಕ ಪಾತ್ರಗಳು ಬೇರೆ ಬೇರೆ ತಿರುವನ್ನು ಪಡೆದಿವೆ" ಎಂದು ವಿಜಯಾ ಹೇಳಿದರು.

ಮಹಿಳಾ ಲೇಖಕಿಯರು ಪೌರಾಣಿಕ — ಚಾರಿತ್ರಿಕ ಪಾತ್ರಗಳನ್ನು ಏಕೆ ಆರಿಸಿಕೊಳ್ಳುತ್ತಾರೆ ಎನ್ನುವುದನ್ನು ವಿಜಯಾ ಹೀಗೆ ವಿವರಿಸಿದರು. "ಪುರಾಣದಲ್ಲಿ ಬರುವ ಬಹುತೇಕ ಸ್ತ್ರೀಪಾತ್ರಗಳು ಅವಮಾನಿಸಲ್ಪಟ್ಟವು. ಉದಾ: ಸೀತೆ, ದ್ರೌಪದಿ ಇತ್ಯಾದಿ. ಪುರುಷ ಲೇಖಕರು ಎಲ್ಲೂ ಇಂತಹ ಪಾತ್ರಗಳಿಗೆ ಬಿಡುಗಡೆ ತೋರಿಸಿಲ್ಲ. ಸಾಧ್ವಿತನವನ್ನು ಪ್ರಕೃತಿಸಹಜವಾದಂತಹ ಗುಣ ಎಂದು ಎಲ್ಲ ಪ್ರಶ್ನೆಗಳನ್ನು, ತರ್ಕಗಳನ್ನು ಮುಚ್ಚಿಹಾಕಿದ್ದಾರೆ. ಇದು ಆಧುನಿಕ ಲೇಖಕಿಯರನ್ನು ಹತಾಶೆಗೊಳಿಸಿವೆ, ಸಿಟ್ಟಿಗೆಬ್ಬಿಸಿದೆ. ಪುರುಷ ಅನುಭವದ ತಿಳುವಳಿಕೆಯಿಂದ ನಿರ್ಮಿತವಾದ ಸಂಸ್ಕೃತಿಯಲ್ಲಿ ಆಧುನಿಕ ಲೇಖಕಿಯರು ಪೌರಾಣಿಕ ಪಾತ್ರಗಳನ್ನು ಬಿಡುಗ

ಡೆಯ ಪ್ರತೀಕವಾಗಿ ಕಂಡಿದ್ದಾರೆ. ಉದಾ: ದ್ರೌಪದಿ, ಕುಂತಿ, ಅಕ್ಕಾಮಹಾದೇವಿ ನಿಶೇಧಾತ್ಮಕ ಪಾತ್ರಗಳಲ್ಲಿ ತಮ್ಮ ಪಾತ್ರ ಕಂಡುಕೊಂಡಿದ್ದಾರೆ, ಸಹಾನುಭೂತಿ ತೋರಿದ್ದಾರೆ. ಅಕ್ಕಮಹಾದೇವಿಯಂತ ಪ್ರತೀಕಗಳನ್ನು ಹೆಮ್ಮೆಯಿಂದ ನೋಡಿದ್ದಾರೆ. ಅವಳಂತೆ ತಾವಾಗಲಿಲ್ಲ ಎಂದು ಹಳಹಳಿಸಿದ್ದಾರೆ."

ನಂತರ ಮಾತನಾಡಿದ ಶ್ರೀಮತಿ ಅನುಪಮಾ ನಿರಂಜನ ಅವರು "ಪೌರಾಣಿಕ-ಚಾರಿತ್ರಿಕ ವಸ್ತುವನ್ನು ತೆಗೆದುಕೊಂಡು ಹಿಂದಿನಿಂದ ಇಂದಿನವರೆಗೆ ಮಹಿಳಾ ಲೇಖಕಿಯರು ಬರೆಯುತ್ತಾ ಬಂದಿರುವುದನ್ನು ಗುರುತಿಸಿದರೆ ಸ್ಪಷ್ಟ ಬೆಳವಣಿಗೆ ಕಾಣುತ್ತದೆ. ಮೊದಲಿನ ಲೇಖಕಿಯರು ಅಲೌಕಿಕಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದರು ಈಗಿನವರು ಹೆಚ್ಚು ಲೌಕಿಕಕ್ಕೆ ಪ್ರಾಮುಖ್ಯ ನೀಡಿದ್ದಾರೆ" ಎರಡು ಗುರುತಿಸಿದರು. ತಾವು 'ಮಾಧವಿ' ಯನ್ನು ಎಲ್ಲಾ ಶೋಷಿತ ಮಹಿಳೆಯರ ಪ್ರತೀಕವಾಗಿ ಸಂಕೇತವಾಗಿ ಆಕೆಯನ್ನ ಚಿತ್ರಿಸಿದುದಾಗಿ ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಹೇಮಲತಾ ಮಹಿಷಿಯವರು ವಹಿಸಿದ್ದರು.

ವಿಶ್ವದಲ್ಲಿ ಪ್ರತಿನಿತ್ಯ ಇಪ್ಪತ್ತೊಂದು ಸಾವಿರ ಮಕ್ಕಳು ಹಸಿವು ಅನಾರೋಗ್ಯಗಳಿಂದ ಮರಣಮುಖರಾಗುತ್ತಿದ್ದಾರೆ ಎಂದು ಯುನಿಸೆಫ್ ವರದಿ ಮಾಡಿದೆ. ಪೌಷ್ಟಿಕಾಂಶದ ಕೊರತೆಯಿಂದ ಎಂಟು ಸಾವಿರ ಮಕ್ಕಳು, ಢಯೋರಿಯಾದಿಂದ ಏಳು ಸಾವಿರ ಮಕ್ಕಳು ಮತ್ತು ನ್ಯೂಮೋನಿಯಾ ಕಾರಣದಿಂದಾಗಿ ಆರು ಸಾವಿರ ಮಕ್ಕಳು ದಿನನಿತ್ಯ ಸಾವನ್ನಪ್ಪುತ್ತಿದ್ದಾರೆ ಎನ್ನುತ್ತದೆ ಯುನಿಸೆಫ್. ಈಗಿನ ಪರಿಸ್ಥಿತಿಯೇ ಮುಂದುವರೆದಲ್ಲಿ ಮುಂದಿನ ದಶಕದಲ್ಲಿ ಸುಮಾರು ಹತ್ತು ಕೋಟಿ ಮಕ್ಕಳು ಡಯೋರಿಯಾ, ನ್ಯೂಮೋನಿಯಾ, ಟೆಟಾನಸ್ ಮುಂತಾದ ಭಯಂಕರ ಕಾಯಿಲೆಗಳಿಗೆ ತುತ್ತಾಗಲಿದ್ದಾರೆ ಎಂದು ಎಚ್ಚರಿಸುತ್ತಾ, ಸೂಕ್ತ ಚಿಕಿತ್ಸೆ ಮತ್ತು ಮುನ್ನೆಚ್ಚರಿಕೆ ಕ್ರಮಗಳಿಂದ ಮಾತ್ರವೇ ಈ ಅನಾಹುತವನ್ನು ತಡೆಯಬಹುದೆನ್ನುತ್ತದೆ ವರದಿ.

ಉನ್ನತ ಮಟ್ಟದ ರಾಜಕೀಯ ಸಮಿತಿಯು, ಕಡಿಮೆ ವೆಚ್ಚದಲ್ಲಿ ಪರಿಹಾರ ಕ್ರಮಗಳನ್ನು ವ್ಯಾಪಕವಾಗಿ ತರಬಲ್ಲದೆಂದು ಅಭಿಪ್ರಾಯ ಪಡುವ ಯುನಿಸೆಫ್ ಈ ಸಂಬಂಧವಾಗಿ ಚರ್ಚಿಸಲು ೧೯೯೦ ಸೆಪ್ಟೆಂಬರ್‌ನಲ್ಲಿ ನ್ಯೂಯಾರ್ಕ್‌ನಲ್ಲಿ ವಿಶ್ವ ಶೃಂಗಸಭೆ ನಡೆಸಲು ತೀರ್ಮಾನಿಸಿದೆ. ನಾಗರಿಕ ಜಗತ್ತಿಗೇ ಅವಮಾನವೆನಿಸುಂತಹ ಸ್ಥಿತಿಯಲ್ಲಿರುವ ಮಕ್ಕಳ ಹಕ್ಕುಗಳ ಬಗ್ಗೆಯೂ ಚರ್ಚೆ ನಡೆಯಲಿದೆ.

ಭಾರತದಲ್ಲಿ ಐದು ಪ್ರಮುಖ ಕಾಯಿಲೆಗಳ ವಿರುದ್ಧ ನಡಸುತ್ತಿರುವ "ಸಮರ" ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದೆ ವರದಿ. ವಿಶ್ವದ ಬಲಾಢ್ಯ ರಾಷ್ಟ್ರಗಳು ಪ್ರತಿನಿತ್ಯ ಶಸ್ತ್ರಾಸ್ತ್ರ, ಸಾಲ ಸೌಲಭ್ಯದಂತಹ ಅನುತ್ಪಾದಕ ಚಟುವಟಿಕೆಗಳಿಗೆಂದು ವ್ಯಯಿಸುವ ಕೋಟಿಗಟ್ಟಲೆ ಹಣ ಅಭಿವೃದ್ಧಿಶೀಲ ರಾಷ್ಟ್ರಗಳ ಮಕ್ಕಳ ಪ್ರಾಣವನ್ನು ಉಳಿಸಬಲ್ಲದೆಂದು ವರದಿ ತಿಳಿಸುತ್ತಾ, ಮಕ್ಕಳ ಆರೋಗ್ಯ ಹಾಗೂ ಪೌಷ್ಟಿಕಾಂಶ ಆಹಾರಗಳ ಬಗ್ಗೆ ಗಮನಹರಿಸುವುದು ತೀರ ಅವಶ್ಯಕವಾಗಿದೆ ಎಂದು ಎಚ್ಚರಿಸಿದೆ.

ಯಾವುದೇ ರೀತಿಯ ಗರ್ಭನಿರೋಧಕಗಳನ್ನಾಗಲಿ, ಗರ್ಭನಿರೋಧಿಸುವ ಗುಳಿಗೆಗಳನ್ನಾಗಲಿ ರುಮೇನಿಯಾದಲ್ಲಿ ಬಳಸುವಂತಿಲ್ಲ, ಬೇಕೆಂದರೂ ಸಿಗುವುದೂ ಇಲ್ಲ. ಗರ್ಭವನ್ನು ನಿವಾರಿಸಿಕೊಳ್ಳುವುದನ್ನು ಅಪರಾಧವೆಂದು ಪರಿಗಣಿಸಿ, ಶಿಕ್ಷೆ ವಿಧಿಸಲಾಗುತ್ತದೆ. ಪ್ರಸೂತಿ ತಜ್ಞರಿಂದ ಪರೀಕ್ಷೆ ಮಾಡಿಸಿ ಗರ್ಭಪಾತ ಮಾಡಿಕೊಂಡಿದ್ದು ಸಾಬೀತಾದರೆ, ಆ ಮಹಿಳೆಗೆ 6 ತಿಂಗಳ ಸೆರೆವಾಸ, ಗರ್ಭಪಾತಕ್ಕೆ ಸಹಕರಿಸಿದ ವೈದ್ಯರು, ಅಥವಾ ದಾದಿಯರಿಗೆ 2 ವರ್ಷಗಳ ಸೆರೆವಾಸ ವಿಧಿಸಲಾಗುತ್ತದೆ.

ಗಿನ್ನೆಸ್ ದಾಖಲೆ ತಲುಪಿದ ಮೈಸೂರಿನ ಸತಿ ಪತಿಯರು.

ಜೋಜೀಲಾ ಪಾಸ್ ಶ್ರೀನಗರ ಹಾಗೂ ಲಡಾಕ್ ನಗರಗಳ ನಡುವೆ ರಚಿಸಲ್ಪಟ್ಟಿರುವ ಪ್ರಪಂಚದ ಅತಿ ಎತ್ತರದ ವಾಹನ ಸಂಚರಿಸುವ ರಸ್ತೆ. ಸಮುದ್ರ ಮಟ್ಟಕ್ಕಿಂತ ಸುಮಾರು ೧೮೪೦೦ ಅಡಿ ಎತ್ತರದಲ್ಲಿದೆ. ಈ ರಸ್ತೆಯ ಮೇಲಿನ ಸಾರಿಗೆಯು ಸಂಪೂರ್ಣ ನಿಯಂತ್ರಣ ಬಿ. ಎಸ್. ಎಫ್. ಅಧೀನದಲ್ಲಿದೆ. ಲಡಾಕ್ ಕಡೆಯಿಂದ ಹೊರಟ ಎಲ್ಲ ವಾಹನಗಳೂ ಈ ಪಾಸ್‌ನಿಂದ ಹೊತ್ತೆಬಂದ ಹೊರತು ಶ್ರೀನಗರದ ಕಡೆಯಿಂದು ಹೊರಡುವ ಯಾವುದೇ ವಾಹನಗಳನ್ನು ಪಾಸ್‌ನೊಳಗೆ ಬಿಡುವುದಿಲ್ಲ. ಅತಿ ಎತ್ತರದ ಕಷ್ಟಕರವಾದ ಈ ರಸ್ತೆಯಲ್ಲಿ ನಾಲ್ಕು ಚಕ್ರದ ವಾಹನಗಳಲ್ಲಿ ಸಂಚರಿಸುವುದು ಕೂಡ ಅಪಾಯಕಾರಿ. ನಿಮಿಷ ನಿಮಿಷಕ್ಕೂ ಹವಾಮಾನದಲ್ಲಿ ಗಂಭೀರ ಬದಲಾವಣೆ ಇರುತ್ತದೆ. ಇದ್ದಕ್ಕಿದ್ದ ಹಾಗೇ ಭೂಕುಸಿತವಾಗುವುದು. ಇಂತಹ ಒಂದು ಭಯಾನಕ ಕಂದಕದಲ್ಲಿ ಮೈಸೂರಿನವರಾದ ಶೈಲ ಹಾಗು ಯೋಗಾನಂದ ಎಂಬ ಸತಿಪತಿಯರು ತಮ್ಮ ತಮ್ಮ ೧೦೦ ಸಿ. ಸಿ. ದ್ವಿಚಕ್ರ ವಾಹನಗಳಲ್ಲಿ ಈ ರಸ್ತೆಯನ್ನು ದಾಟಿ ಗಿನ್ನೆಸ್ ದಾಖಲೆ ನಿರ್ಮಿಸಿದ್ದಾರೆ.

ಶ್ರೀಮತಿ ಶೈಲ ಕೈನೆಟಿಕ್ ಹೋಂಡಾ ಕೊಂಡದ್ದು ಮಕ್ಕಳನ್ನು ಶಾಲೆಗೆ ಬಿಟ್ಟು ಕರೆತರಲು ಹಾಗೂ ಮಾರುಕಟ್ಟೆಗೆ ಹೋಗಿಬರಲು. ಈ ಸತಿಪತಿಯರು ಪುಣೆಯಲ್ಲಿ ವಾಸಿಸುವವರು. ಮೇ ೧೯೮೯ರಲ್ಲಿ ತಮ್ಮ ತಮ್ಮ ವಾಹನಗಳಲ್ಲಿ ಪುಣೆಯಿಂದ ಹೊರಟು ೫೧ ದಿನಗಳ ನಂತರ ರೋಮಾಂಚಕಾರಿ ಅನುಭವದೊಂದಿಗೆ, ಈ ರಸ್ತೆಯನ್ನು ದ್ವಿಚಕ್ರ ವಾಹನದಲ್ಲಿ ದಾಟಿದ ಮೊಟ್ಟ ಮೊದಲ ಸತಿಪತಿಯರಾಗಿದ್ದಾರೆ.

ಪುಣೆಯಿಂದ ಹೊರಟ ಇವರು ಕಚ್ ಮರಳುಗಾಡಿನ ಮೂಲಕ ಹಾದು ಹೋಗಬೇಕಾಗಿ ಬಂದಿದ್ದು, ೪೮ ಡಿಗ್ರಿ ಉಷ್ಣಾಂಶದಲ್ಲಿ ಬೀಸುವ ಮರಳಿನ ಧೂಳಿನಲ್ಲಿ, ರಸ್ತೆ ಯಾವುದು ಮರಳು ಗಾಡು ಯಾವುದು ತಿಳಿಯದಾಗಿ ಬಹಳ ಕಷ್ಟಪಟ್ಟಿದ್ದಾರೆ. ನಂತರ ಮಧ್ಯಪ್ರದೇಶದ ಅಮರ ಕಟಕ ಕಾಡಿನ ಮೂಲಕ ದೆಹಲಿಗೆ ಹೋಗಿ ಮೇ ೨೯ರಂದು ಶ್ರೀನಗರ ತಲುಪಿದರು. ಕಾಶ್ಮೀರದ ಮುಖ್ಯ ಮಂತ್ರಿಯವರಿಂದ ರೆಕಮಂಡೇಷನ್ ಪತ್ರ ಪಡೆದು ಬಿ. ಎಸ್. ಎಫ್. ನವರಿಗೆ ಕೊಟ್ಟು ತಮ್ಮ ಸಂಚಾರ ಮುಂದುವರೆಸಿದರು.

ಪಾಸ್‌ನಲ್ಲಿ ಸಂಚರಿಸುವಾಗ ಅವರಿಗೆ ಸಾಕಷ್ಟು ಅಡೆ ತಡೆಗಳು ಎದುರಾಗಿವೆ, ಕೆಲವು ಕಡೆ ರಸ್ತೆಯಲ್ಲಿ ಮಂಡಿ ಮುಳುಗುವವರೆಗೂ ನೀರಿದ್ದು, ಸ್ಕೂಟರಿನ ಸೈಲೆನ್ಸರ್ ಹಾಗೂ ಮ್ಯಾಗನೆಟ್‌ಗಳಲ್ಲಿ ತುಂಬಿಕೊಂಡರೂ ವಾಹನ ಕೈಕೊಡದಿದ್ದು ಪವಾಡವೇ ಸರಿ!

ನೀರ್ಗಲ್ಲುಗಳಿಂದ ಕೂಡಿದ ಒರಟು ರಸ್ತೆ, ೫೦ ಅಡಿ ಎತ್ತರದ ಹಿಮ ಗೋಡೆಗಳ ನಡುವೆ, ಭೂಕುಸಿತದ ಅಪಾಯದ ನಡುವೆಯೂ ಯಶಸ್ವಿಯಾಗಿ ತಮ್ಮ ಗುರಿ ತಲುಪಿ ಬಂದಿದ್ದಾರೆ. ಏನೇ ಬರಲಿ ಗುರಿ ತಲುಪಬೇಕು ಎಂಬ ದೃಢ ಮನಸ್ಸು, ಜೀವವನ್ನೂ ಲೆಕ್ಕಿಸದೆ ಇವರು ಕೈಗೊಂಡ ಸಾಹಸ ಕಾರ್ಯವನ್ನು ಯಾರೇ ಆದರೂ ಶ್ಲಾಘಿಸಬೇಕು.

ದ್ವಿಚಕ್ರ ವಾಹನದಲ್ಲಿ ಈ ರಸ್ತೆಯನ್ನು ದಾಟಿ ಇತಿಹಾಸ ನಿರ್ಮಿಸಿದ್ದಾರೆ. ಸಾಹಸ ಹಾಗೂ ರೋಮಾಂಚಕಾರಿ ಅನುಭವದೊಂದಿಗೆ ಜಗತ್ತಿನ ಅತಿ ಎತ್ತರದ, ವಹನ ಓಡಾಡುವ ರಸ್ತೆಯನ್ನು ದಾಟಿದ ಪ್ರಥಮ ಮಹಿಳೆ ಎನ್ನುವ ಕೀರ್ತಿಗೆ ಶ್ರೀಮತಿ ಶೈಲ ಪಾತ್ರರು. ಇನ್ನೂ ಅನೇಕ ರೋಮಾಂಚಕಾರಿ ಅನುಭವ, ಹಾಗೂ ಯಶಸ್ಸು ಈಕೆಗೆ ದೊರೆಯಲಿ ಎಂದು ನಮ್ಮ ಹಾರೈಕೆ.

ಸವಿತ.
೮ಬಿ ಬಿ

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗು ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿದ ಲೇಖನಗಳಿಗೆಂದು "ಮೌನ ಮಾತಾದಾಗ" ಅಂಕಣವಿದೆ. ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

ಸಂ. ಮಂ.

ಆ ಮನೆಯಲ್ಲಿ ೫ ಜನ ಗಂಡುಮಕ್ಕಳು, ಒಬ್ಬಳೇ ಮಗಳು. ಬಡತನವಾದರೂ ಮಗಳನ್ನು ಮುದ್ದಿನಿಂದ ಬೆಳೆಸಿದ್ದರು. ಅವಳು ಎಸ್. ಎಸ್. ಎಲ್. ಸಿ. ಮುಗಿಸುವಷ್ಟರಲ್ಲೇ ಮದುವೆ ನಿಶ್ಚಯಿಸಿದರು ಮನೆಯಲ್ಲಿ. ಇವಳಿಗೆ ಓದುವ ಆಸೆಯಿದ್ದರೂ ಮನೆಯವರ ಬಲವಂತಕ್ಕೆ, ತಾಯ್ತಂದೆಯರಿಗೆ ನೋವು ನೀಡಲಿಚ್ಛಿಸದೆ ಮದುವೆಗೆ ಒಪ್ಪಿಕೊಳ್ಳುತ್ತಾಳೆ. ೩೦೦೦ ರೂ. ವರದಕ್ಷಿಣೆ ಕೊಡುವುದೆಂದು ಒಪ್ಪಿಕೊಂಡಿದ್ದರೂ ಅಷ್ಟು ಹಣ ಹೊಂದಿಸಲು ಹುಡುಗಿಯ ತಂದೆಗೆ ಅಸಾಧ್ಯವಾಗುತ್ತದೆ. ಮದುವೆಯ ಹೊತ್ತಿಗೆ ಬಹಳ ಕಷ್ಟದಿಂದ ೨೦೦೦ ರೂ. ಹೊಂದಿಸಿದರೂ ಹುಡುಗನ ತಂದೆ ತಿರಸ್ಕರಿಸಿದ. ಕೊನೆಗೂ ಹುಡುಗಿಯ ತಾಯಿ-ತಂದೆ ಅವನ ಕಾಲು ಹಿಡಿದು ಉಳಿದ ಹಣವನ್ನು ಆದಷ್ಟು ಬೇಗ ನೀಡುವುದಾಗಿ ಬೇಡಿಕೊಂಡ ಮೇಲೆ ಮದುವೆ ನಡೆಯುತ್ತದೆ. ಮದುವೆಯಾದ ಸ್ವಲ್ಪ ದಿನಗಳವರೆಗೆ ಸುಮ್ಮನಿದ್ದ ಗಂಡನ ಮನೆಯವರು ಆ ಹುಡುಗಿಗೆ ಹಿಂಸೆನೀಡಲು ಪ್ರಾರಂಭಿಸಿದರು, ಮನೆಗೆಲಸದಹಳಂತೆ ನಡೆಸಿಕೊಂಡರು. ಇಲ್ಲಿಗೇ ನಿಲ್ಲದೆ ಅವಳು ಗರ್ಭಿಣಿಯೆಂದು ತಿಳಿದ ಕೂಡಲೆ ಅವಳನ್ನು ಮನೆಯಿಂದ ಓಡಿಸಿದರು. ಸ್ವಲ್ಪ ದಿನಗಳ ನಂತರ ಮಗಳನ್ನು ನೋಡಿಕೊಂಡು ಹೋಗುವ ಉದ್ದೇಶದಿಂದ ತಾಯಿ ತಂದೆ ವರದಕ್ಷಿಣೆಯ ಬಾಕಿ ಹಣದೊಂದಿಗೆ ಬಂದವರಿಗೆ ಮಗಳಿಗೆ ಬದಲಾಗಿ ಅವಳ ಸ್ಥಾನದಲ್ಲಿ ಮತ್ತೊಬ್ಬಳಿರುವುದು ತಿಳಿಯಿತು. ತಮ್ಮ ಮಗಳ ಬಗ್ಗೆ ಕೇಳಿದ ಹೆತ್ತವರಿಗೆ ನಿಮ್ಮ ಮಗಳು ಯಾರೊಡನೆಯೋ ಓಡಿ ಹೋದಳೆಂದು ಒರಟಾಗಿ ನುಡಿದು ಮುಖಕ್ಕೆ ಹೊಡೆದಂತೆ ಬಾಗಿಲು ಹಾಕಿಕೊಂಡರು. ದುಃಖದಿಂದ ಹಿಂತಿರುಗಿದ ತಾಯ್ತಂದೆಗಳು ಮಗಳಿಗಾಗಿ ಊರೆಲ್ಲ ಹುಡುಕಿಸಿದರು. ನಂತರ ಗಂಡನ ಮನೆಯಲ್ಲಿ ಬಾಳಿ ಬದುಕಲು ಅವಕಾಶದಿಂದ ವಂಚಿತಳಾಗಿದ್ದವಳು ಅವಮಾನದಿಂದ ತವರಿಗೂ ಹೋಗದೆ, ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಸಿಗುತ್ತದೆ. ಮಗಳ ಸಾವಿಗೆ ನಾವೆ ಕಾರಣರಾದೆವೆಂದು ರೋಧಿಸಿದರು, ಈಗ ಎಷ್ಟು ರೋಧಿಸಿದರೇನು ಬಂತು ಹೋದವಳು ಬರುವಂತಿಲ್ಲವಲ್ಲ.

ಈ ಸಮಾಜದಲ್ಲಿ ಕಾಲ ಬದಲಾದಂತೆ ಮನುಷ್ಯರೂ ಬದಲಾದರೂ ಹೆಣ್ಣು ಮಕ್ಕಳ ಸ್ಥಾನ ಹಾಗೇ ಉಳಿದಿದೆ. ಹೆಣ್ಣೆಂದರೆ ಬಹಳಷ್ಟು ಜನ ಜೊಲ್ಲು ಸುರಿಸುವುದಷ್ಟೇ ಅಲ್ಲದೆ, ಅವರ ದೃಷ್ಟಿಯಲ್ಲಿ ಸ್ತ್ರೀಯರಿಗೆ ಬೆಲೆಯಿಲ್ಲ, ಹಿರಿಯರೆನ್ನಿಸಿಕೊಂಡ ಕೆಲವರು ಹೆಣ್ಣು ಮಕ್ಕಳಿಂದಲೇ ಆರ್ಥಿಕ ಆಸರೆ ಪಡೆದಿದ್ದರೂ ಅವರ ಮೇಲೆಯೇ ಅಧಿಕಾರ ಚಲಾಯಿಸಿ ಹಿಂಸಿಸುತ್ತಾರೆ. ಇನ್ನು ಇಂದಿನ ಬಹಳಷ್ಟು ಮಂದಿ ಹುಡುಗರ ವರ್ತನೆಯಂತೂ ಹೇಳುವಂತೇ ಇಲ್ಲ. ಮದುವೆಯ ಯೋಚನೆ ಬರುವವರೆಗೂ ಕಂಡ ಕಂಡ ಹುಡುಗಿಯರನ್ನು ಚುಡಾಯಿಸುತ್ತಾ ಅವರಿವರ ಬಗ್ಗೆ ಗೆಳೆಯರ ಕಿವಿ ಕಚ್ಚುತ್ತ ಇರುವವರು ಒಮ್ಮೆಲೆ ಸಂಭಾವಿತರಾಗಿಬಿಡುತ್ತಾರೆ. ಇವರಿಗೆ ಹುಟ್ಟಿದಾರಭ್ಯ ಪುರುಷರ ಕಡೆಗೆ ಕಣ್ಣೆತ್ತಿಯೂ ನೋಡದ ಪರಿಶುದ್ಧ ಕನ್ಯೆಯೇ ಬೇಕು. ಇದುವರೆಗೆ ತಾನೆಷ್ಟು ಹುಡುಗಿಯರನ್ನು ಚುಡಾಯಿಸಿದ್ದೇನೆ, ವಂಚಿಸಿದ್ದೇನೆ, ಎಂದು ಯೋಚಿಸುವುಲ್ಲ.

ವೈಯಕ್ತಿಕ ಸ್ವಾತಂತ್ರ್ಯವಿಲ್ಲದ ಗೆಳತಿಯೊಬ್ಬಳು

ಸಹನೆ ಕಳೆದುಕೊಂಡು, ರೊಚ್ಚಿಗೆದ್ದು ಆತ್ಮಹತ್ಯೆಗೆ ಯತ್ನಿಸಿ, ವಿಫಲಳಾದಳು. ಈಗ ಎಲ್ಲರ ಅಪಹಾಸ್ಯಕ್ಕೆ ಗುರಿಯಾಗಿ, ನೋವುಣ್ಣುತ್ತಿರುವ ಅವಳು ತಾನು ಸಾಯಲು ಯತ್ನಿಸಿದ್ದು ದುರಂತವಲ್ಲ, ಬದುಕುಳಿದಿರುವುದೇ ದುರಂತ ಎನ್ನುತ್ತಾಳೆ.

ಸಮಾಜದ ಉದ್ಧಾರ ಸ್ತ್ರಿಯರ ಉದ್ಧಾರದಲ್ಲಿ ಅಡಗಿದೆ. ಇವೆರಡೂ ಸಾಧ್ಯವಾಗಬೇಕಾದರೆ ಮಾನವೀಯ ಗುಣ ನಡತೆಗಳಿಂದ ಮಾತ್ರ ಸಾಧ್ಯ. ಇಂತಹ ಅನಾಹುತಗಳನ್ನು ತಡೆಗಟ್ಟುವುದು ಎಲ್ಲರ ಕರ್ತವ್ಯ ಅಲ್ಲವೆ?

ಎನ್. ನಾಗಮಣಿ
ಕಾಡುಗೋಡಿ.

ಮರೆಯಲ್ಲಿ ಮಿನುಗುವ ನಕ್ಷತ್ರಗಳು

“ಭಾರತದ ಇತಿಹಾಸದಲ್ಲಿ ಆದರಲ್ಲೂ ದಕ್ಷಿಣಭಾರತದ ಇತಿಹಾಸದಲ್ಲಿ ಅಳಿಸಲಾರದ ಛಾಪು ಉಳಿಸಿ ಹೋದ ಅನೇಕ ವೀರವನಿತೆಯರಿದ್ದಾರೆ.”

“ಕೆಳದಿಯ ಸೋಮಶೇಖರನಾಯಕನ ರಾಣಿಯೇ ಹೆಸರಾಂತ ಬಿದನೂರು ಚೆನ್ನಮ್ಮಾಜಿ. ಪತಿ ವಿಯೋಗದಿಂದ ಆಘಾತಗೊಂಡಿದ್ದ ರಾಣೀ ಚೆನ್ನಮ್ಮಾಜಿಯನ್ನು ಒಮ್ಮೆಗೆ ಅನೇಕ ಸಮಸ್ಯೆಗಳು ಮುತ್ತಿದ್ದವು. ಆಂತರಿಕ ದುಷ್ಟರನ್ನು ಪತ್ತೆ ಹಚ್ಚಿ ಕ್ರೂರ ಶಿಕ್ಷೆಗೊಳಪಡಿಸಿ ಆಡಳಿತದಲ್ಲಿ ಸಂಘಟನೆ ತಂದಿದ್ದ ಆಕೆಯ ಧೈರ್ಯ, ದಕ್ಷತೆ ಮತ್ತು ಮೇಧಾಶಕ್ತಿಗೆ ದ್ಯೋತಕವಾಗಿತ್ತು. ಔರಂಗಜೇಬನ ದಾಳಿಯಿಂದ ತತ್ತರಿಸಿ ಓಡಿಬಂದು ಆಶ್ರಯ ಬೇಡಿದ ಮರಾಠರ ರಾಜಾರಾಮನಿಗೆ ನೀಡಿದ ರಕ್ಷಣೆ ಕನ್ನಡದ ವೀರ ಮಹಿಳೆ ತೋರಿದ ಧೈರ್ಯ, ಸಾಹಸಕ್ಕೆ ಒಂದು ನಿದರ್ಶನವಾಗಿದೆ. ಕೊನೆಗೆ ತನ್ನ ಮೇಲೂ ಎರಗಿ ಬಂದ ಔರಂಗಜೇಬನನ್ನ ಹಿಮ್ಮೆಟ್ಟಿಸುವಷ್ಟರ ಮಟ್ಟಿಗೆ ತನ್ನ ಚಿಕ್ಕ ಸಂಸ್ಥಾನವನ್ನು ಬಲಪಡಿಸಿದ್ದಳು. ಇದರಿಂದಾಗಿ ಈ ಕನ್ನಡ ವೀರ ರಮಣಿಯ ಕೀರ್ತಿ ಉತ್ತರ ಭಾರತದಲ್ಲೂ ಹರಡಿತ್ತು.”

ಮೊದಲನೆ ಹುಸೇನ ನಿಜಾಂಷಾನ ಮಗಳಾಗಿದ್ದ ಚಾಂದ್‌ಬೀಬಿಯು ರೂಪವತಿ, ಸಚ್ಚಾರಿತ್ರ್ಯ ಕೆಚ್ಚೆದೆ, ಪರಾಕ್ರಮಗಳಿಗೆ ಹೆಸರಾಗಿದ್ದಳು. ೧೫೬೪ರಲ್ಲಿ ಬಿಜಾಪುರದ ಮೊದಲನೆ ಆಲಿ ಆದಿಲ್‌ಷಾನನ್ನು ಮದುವೆಯಾಗಿ ಬಿಜಾಪುರದ ರಾಜಕೀಯದಲ್ಲಿ ಗಮನಾರ್ಹವಾದ ಪಾತ್ರ ವಹಿಸಿದ್ದಳು. ೧೫೮೦ರಲ್ಲಿ ಅಹಮ್ಮದ್ ನಗರಕ್ಕೆ ಹಿಂತಿರುಗಿದ ಚಾಂದ್‌ಬೀಬಿ ಅಲ್ಲಿ ಶಾಂತಿ ಸುವ್ಯವಸ್ಥೆಗಾಗಿ ಶ್ರಮಿಸಿದ್ದಳು. ಮೊಘಲ್ ಆಕ್ರಮಣದ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ್ದಳು. ೧೬೦೦ ರಲ್ಲಿ ಅಹಮ್ಮದ್ ನಗರದ ಜನರಿಂದಲೆ ಅನ್ಯಾಯವಾಗಿ ಕೊಲ್ಲಲ್ಪಟ್ಟಳು.

“ಕಾಕತೀಯ ಶ್ರೇಷ್ಠ ದೊರೆಗಳಲ್ಲಿ ಒಬ್ಬನಾದ ಗಣಪತಿಗೆ ಗಂಡುಮಕ್ಕಳಿರಲಿಲ್ಲ. ರುದ್ರಾಂಬಾ ಮತ್ತು ಗಣಪಮಾದೇವಿ ಎಂಬ ಎರಡು ಹೆಣ್ಣುಮಕ್ಕಳಿದ್ದರು. ಗಣಪತಿ ತನ್ನ ಹಿರಿಯ ಮಗಳಾದ ರುದ್ರಾಂಬಾಳನ್ನೆ ಮಗನೆಂದು ತಿಳಿದು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದನು. ಅವಳಿಗೆ “ರುದ್ರಾಂಬಾ ಮಹಾರಾಜ” ಎಂದು ಹೆಸರಿಟ್ಟಿದ್ದನು. ರುದ್ರಾಂಬಾಳ ದೀರ್ಘವಾದ ಆಳಿಕೆಯ ಕಾಲದಲ್ಲಿ ಅನೇಕ ಮಹತ್ವದ ಘಟನೆಗಳು ಜರುಗಿದವು.

ಯಾದವ ದೊರೆಯ ವಿರುದ್ಧ ನಡೆದ ಯುದ್ಧದಲ್ಲಿ ಕಲಿತನದಿಂದ ಕಾದಾಡಿ ತನ್ನ ರಾಜ್ಯವನ್ನು ರಕ್ಷಿಸಿದಳು. “ಮಹಾರಾಜ” ಎಂದು ಬಿರುದು ಧರಿಸಿದ್ದ ರುದ್ರಾಂಬಾ ಪುರುಷ ವೇಷಧಾರಿಣಿಯಾಗಿ ವಿದೇಶಿಯರಿಗೆ ಸಂದರ್ಶನ ನೀಡುತ್ತಿದ್ದಳು. ಲೋಕೋಪಯೋಗಿ ಕಾರ್ಯಗಳಲ್ಲಿ ಆಸಕ್ತಿ ವಹಿಸುತ್ತಿದ್ದ ರುದ್ರಾಂ

ಬಾಳೆ ಆಶ್ರಯದಲ್ಲಿ ಅನೇಕ ಕವಿಗಳು, ಪಂಡಿತರು ಇದ್ದರು."

"ಗೇರು ಸೊಪ್ಪೆಯ ಭೈರಾದೇವಿ ಕೂಡ ಇಂಥ ವೀರ ನಾರಿಯರಲ್ಲಿ ಒಬ್ಬಳು."

ರಾಧಾ ಗ. ಗುಡಿ.

ಪಾಕಿಸ್ತಾನವು ಮೊಟ್ಟ ಮೊದಲಿಗೆ **ಮಹಿಳಾ ಬ್ಯಾಂಕೊಂ** ದನ್ನು ಸ್ಥಾಪಿಸಿದೆ. ಸುಮಾರು 102 ಮಿಲಿಯನ್ ರೂ ಗಳ ಮೊತ್ತದ ಈ ಬ್ಯಾಂಕ್‌ನ ಗುರಿ ಮಹಿಳೆಯರಿಗೆ ಉದ್ಯೋಗ ಕ್ಷೇತ್ರದಲ್ಲಿ ಸಮಾನ ಅವಕಾಶ ಕಲ್ಪಿಸಿಕೊಡುವುದಾಗಿದೆ. ಉಳಿತಾಯ ಮಾಡುವ ಬಗೆ, ಹಣಕಾಸಿನ ವ್ಯವಹಾರ ಇತ್ಯಾದಿ ವಿಚಾರಗಳಲ್ಲಿ ಮಹಿಳೆಯರಿಗೆ ಅರಿವು ಮೂಡಿಸಲು ಮಹಿಳೆಯರಿಂದಲೇ ಸಹಕಾರ ಬಯಸುವ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದೆ. ಈ ಬ್ಯಾಂಕ್ ಸಾಲ ಸೌಲಭ್ಯ ಹಾಗೂ ಕಡಿಮೆ ದರದಲ್ಲಿ ಸಾಲ ಕೊಡುವ ಏರ್ಪಾಡು ಮಾಡಿಕೊಂಡಿದೆ. ಈ ತರಹದ ಸ್ಕೀಮ್‌ಗಳು ಇಂಡೋನೇಷಿಯಾ ಹಾಗೂ ಬಾಂಗ್ಲಾ ದೇಶಗಳಲ್ಲಿಯೂ ಜಾರಿಗೆ ಬಂದಿದ್ದು, ಯಶಸ್ವಿಯಾಗಿವೆ.

ಅರಗಿಳಿ

ಅಕ್ಕಾ, ನಾ ನಿನ್ನಂತೆ ದಿಟ್ಟೆಯಾಗಲಿಲ್ಲ ನೋಡು
ಪರಂಪರೆಯ ಧಿಕ್ಕರಿಸಿ ಸೆಟೆದು ನನ್ನಿಷ್ಟಕ್ಕೆ ಹಿಡಿಯಲಿಲ್ಲ ಜಾಡು
ಸಾವು ಕೇಡಿಲ್ಲದ ಗಂಡನ್ನ ಕೂಡಿ ನಿನ್ನಂತೆ ಗಟ್ಟಿಯಾಗ ಲಿಲ್ಲ ನಾನು
ಒಳಗೂ ಹೊರಗೂ ತೆರೆದಿಟ್ಟ ನಿನಗೆ ದಿಟ್ಟೆಯಾಗಲಿಲ್ಲವೆ ಹೇಳು,
ನನ್ನವ್ವ, ಅವಳವ್ವ, ಅವಳವ್ವನವ್ವ ತೋರಿಸಿದ್ದೇ ಹಾದಿ ನನಗೆ
ಅವರೆಲ್ಲ ಹಾಕಿದ್ದ ಮೂಗುದಾರವೆ ಸ್ವರ್ಗವಾಯಿತೆ ಕೊನೆಗೆ
ನನ್ನಿಷ್ಟಕ್ಕೆ ನಡೆವ ಹಾದಿಯ ಹೇಳು ಎಲ್ಲಿದೆ ನನಗೆ
ನನ್ನೊಳಗನೆಲ್ಲ ಸುಟ್ಟು ಕರಿಕಾಗಿಸುತ್ತಾ
ಬಯಕೆ ತಂದವನ ನಾನೇ ಚಿವುಟುತ್ತಾ
'ಬಂಧನ'ವ ತಂದವನ ತಾಳಿಕೊಳ್ಳುತ್ತಿದ್ದೇನೆ,
ಅವನ ಬಯಕೆಗಳಿಗೆಲ್ಲ ತಾಳ ಹಾಕುತ್ತಿದ್ದೇನೆ
ನನ್ನತನದ ಸರಮಾಲೆ ಅವನ ಕೊರಳಿಗೆ ಕಟ್ಟಿ ನಡೆದಿದ್ದೇನೆ
ಅವನ ಅರಮನೆಯ ಅರಗಿಳಿಯಾಗಿ ಕಾಲ ನೂಕುತ್ತಿದ್ದೇನೆ...
ಕಾಲ ನೂಕುತ್ತಿದ್ದೇನೆ............!
ಕಾಲ ನೂಕುತ್ತಿದ್ದೇನೆ............!

ದುರ್ಗಾಸುತೆ

ಚಂದಾದಾರರಿಗೆ

ಪ್ರಿಯರೇ,

ಒಂದು ವರ್ಷದಿಂದ 'ಮಾನಸ' ತಿಂಗಳ ಪತ್ರಿಕೆ'ಯನ್ನು ನಿಯತಕಾಲಿಕವಾಗಿ ತರುತ್ತಿರುವ ನಮ್ಮ ಪ್ರಯತ್ನಗಳಿಗೆ ನಿಮ್ಮ ಪ್ರೋತ್ಸಾಹ ಹಾಗೂ ಸಹಕಾರಗಳೇ ಆಧಾರವಾಗಿದೆ. ಈ ಡಿಸೆಂಬರ್‌ನಲ್ಲಿ ಬರುವ ಸಂಚಿಕೆಯು ಸೇರಿ ನಿಮಗೆ ಒಟ್ಟು ಹತ್ತು ಸಂಚಿಕೆಗಳು ತಲುಪಿರಬೇಕು. ನಾವು ಜನವರಿಯಿಂದ ಜನವರಿಗೆ ಚಂದಾ ಸಂಗ್ರಹಿಸುತ್ತೇವೆ. ಮಧ್ಯದಲ್ಲಿ ಚಂದಾ ಕಳಿಸಿದ ಚಂದಾದಾರರಿಗೂ ವರ್ಷದ ಎಲ್ಲಾ ಸಂಚಿಕೆಯನ್ನು ಕಳುಹಿಸಿರುತ್ತೇವೆ. ಹಾಗೇ ಕಳುಹಿಸಿರದಿದ್ದಲ್ಲಿ ತಾವು ಪತ್ರ ಬರೆದು ತರಿಸಿಕೊಳ್ಳಬೇಕು. ನೀವು ಮಧ್ಯದಲ್ಲಿ ಚಂದಾದಾರರಾಗಿದ್ದರೂ ಸಹ ನೀವು ಹಿಂದಿನ ಸಂಚಿಕೆ ತರಸಿಕೊಂಡು ಮತ್ತೆ ಜನವರಿಗೆ ಚಂದಾ ನವೀಕರಿಸಿದಲ್ಲಿ ನಮಗೆ ಎಲ್ಲಾ ದೃಷ್ಟಿಯಿಂದಲೂ ಅನುಕೂಲವಾಗುತ್ತದೆ. ದಯವಿಟ್ಟು ಎಲ್ಲಾ ಚಂದಾದಾರರೂ ಈ ತಿಂಗಳು ಹಾಗೂ ಮುಂದಿನ ತಿಂಗಳ ಒಳಗಾಗಿ 1990 ನೇ ಇಸವಿಗೆ ತಮ್ಮ ಚಂದಾವನ್ನು ನವೀಕರಿಸಬೇಕಾಗಿ ವಿನಂತಿಕೊಳ್ಳುತ್ತೇವೆ.

ಸಂ. ಮಂಡಳಿ

ಕರ್ನಾಟಕದ ರಂಗ ಪರಂಪರೆಯ ಜೀವಂತ ಸಾಕ್ಷಿ – ಸೋನೂಬಾಯಿ ದೊಡ್ಡಮನಿ



ರಂಗದ ಬಿಂಗಿನಲ್ಲಿಯೇ ಹುಟ್ಟಿ, ಬೆಳೆದು ಸಂಗೀತ ಸಾಧನೆಗೆ ತೊಡಗಿ, ಮೂವತ್ತರ ದಶಕದಿಂದ ಅರವತ್ತರ ದಶಕದವರೆಗೆ ಗಾಯಕಿಯಾಗಿ, ರಂಗನಟಿಯಾಗಿ ರಂಗ–ಸಂಗೀತಗಳೆರಡರಲ್ಲೂ ಅಸಮಾನ್ಯ ಸಾಧನೆ ಗೈದವರು. ನಮ್ಮ ರಂಗ ಪರಂಪರೆಯ ಜೀವಂತ ಸಾಕ್ಷಿಯಾಗಿ ನಿಂತರು — ಸೋನೂಬಾಯಿ ದೊಡ್ಡಮನಿ.

"ರಂಗಭೂಮಿ - ಸಂಗೀತ ಸಾಧನಾನ ನನ್ನ ಪಾಲಿನ ಸಾಲಿ ಎನ್ನುವ ಸೋನೂಬಾಯಿ ಮಾತನಾಡಿದರೆ ಕಾವ್ಯಶ್ರವಣ ಮಾಡಿದ ಅನುಭವ: ಹಾಡತೊಡಗಿದರೆ ಕೇಳಿದವರಿಗೆ ಗಂಧರ್ವ ಲೋಕದಲ್ಲಿ ಸಂಚರಿಸಿದ ಭಾವ.

ಹತ್ತರೆಳೆವೆಯಲ್ಲಿಯೇ ಬಾಲನಟಿಯಾಗಿ ರಂಗವನ್ನು ಪ್ರವೇಶಿಸಿದವರು ಸೋನೂಬಾಯಿ. ಕಲಾವಿದ ವಣಗಿ ಬಾಳಪ್ಪ ಕಣ್ಮರೆಯಾಗಿರುವ ಕನ್ನಡ ಕೋಗಿಲೆ ಪಿ. ಕಾಳಿಂಗರಾವ್ – ಮುಂತಾದ ರಂಗದಿಗ್ಗಜಗಳೊಂದಿಗೆ ಸ್ನೇಹ ಗೌರವಗಳಿಗೆ ಪಾತ್ರರಾದ ಸೋನೂಬಾಯಿ ರಂಗಗೀತೆಗಳಿಗೊಂದು ಅನ್ವರ್ಥ ಹೆಸರು.

ಸ್ವಂತ ಕಂಪನಿ ಕಟ್ಟಿ ಸಂತಸದ ದಿನಗಳಷ್ಟೇ ಅಥವ ಆದರ ಮುಪ್ಪಟ್ಟು ಸಾಲಸೋಲದ ದಿನಗಳನ್ನು ಕಂಡವರು ಸೋನೂಬಾಯಿ. ರಂಗಭೂಮಿಯಷ್ಟೇ ಕಾಳಜಿಯನ್ನು ಶಾಸ್ತ್ರೀಯ ಸಂಗೀತಕ್ಕೂ ನೀಡಿದವರು ಸೋನೂಬಾಯಿ. ಹಿಂದೂಸ್ತಾನಿ ಸಂಗೀತದ ಆಧಾರದ ಮೇಲೆ ಸೃಜಿತವಾದ ಇವರ ರಂಗಗೀತೆಗಳ ಹಾಡುಗಾರಿಕೆ ಇಂದಿಗೂ ಮುಂದುವರೆದುಕೊಂಡೇ ಬಂದಿದೆ.

1955ರ ಕಾಲದಲ್ಲೇ ಶ್ರೀಕಂಠ ಶಾಸ್ತ್ರಿಗಳ "ಬಸವೇಶ್ವರ" "ಅಕ್ಕಮಹಾದೇವಿ" ಗರೂಡರ "ಶರಣಬಸವ" ಎನ್ಕೆ ಅವರ "ರೇಣುಕಾ" ನಾಟಕಗಳನ್ನು ಕೊಲಂಬಿಯಾ ಗ್ರಾಮಫೋನ್ ಕಂಪನಿ ಮೂಲಕ ಧ್ವನಿಮುದ್ರಿಸಿ ಗ್ರಾಮೀಣ ಜನಕ್ಕೆ ಮುಟ್ಟಿಸಿದವರು ಈಕೆ.

ಅರವತ್ತರ ದಶಕದಲ್ಲಿ ರಂಗಭೂಮಿಯಿಂದ ನಿವೃತ್ತಿ ಪಡೆದರೂ ರಂಗಗೀತೆಗಳನ್ನು ಜನಪ್ರಿಯಗೊಳಿಸುವತ್ತ ತಮ್ಮನ್ನು ತೊಡಗಿಸಿಕೊಂಡಿರುವ ಸೋನೂಬಾಯಿಗೆ ಈಗ 70ರ ಹರೆಯ.

ಹರೆಯ ಅಂದರೆ, ಅಷ್ಟು ಚಟುವಟಿಕೆಯುಳ್ಳ ಚೈತನ್ಯ ಅವರದು. ಈಗ ಅವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ತಮ್ಮ ಬಾಳ ಹೆಜ್ಜೆಗಳನ್ನು ಹಿಂತಿರುಗಿ ನೋಡುತ್ತಿದ್ದಾರೆ.

ರಂಗಭೂಮಿಯ ಸಂಗೀತದ ಮೂಲಕ ಜನರನ್ನು ರಂಜಿಸಿದ ಸೋನೂಬಾಯಿ ದುಃಖಿತ ಜನರ ಸಹಾಯಾರ್ಥವಾಗಿಯೂ ಸಂಗೀತ - ಸಂಜೆ ನಡೆಸಿದ ಹೃದಯವಂತೆ.

ಕರ್ನಾಟಕ ನಾಟಕ ಅಕಾಡೆಮಿ 1988 – 89ರ ಸಾಲಿನ ಪ್ರಶಸ್ತಿ ನೀಡಿ ಅವರನ್ನು ಗೌರವಿಸಿತು.

ಆಗಿನ ಕಾಲದ ಸುಪ್ರಸಿದ್ಧ ಸಂಗೀತ ವಿದುಷಿ ಬಚ್ಚಾಸಾನಿ. ಸಂಗೀತಕ್ಕೆ ಹೇಗೋ ನಾಟಕಕ್ಕೂ ಹಾಗೆಯೇ ಅಕೆಯದು ದೊಡ್ಡ ಹೆಸರು. ಈ ಬಚ್ಚಾಸಾನಿಯವರ ಕಿರಿಯ ಸೋದರಿ ಪೀರವ್ವ ಸೋನೂಬಾಯಿ ಅವರತಾಯಿ. ಹಾಗಾಗಿ ರಂಗದ ಪರದೆಯ ಹಿಂದೆ ಹುಟ್ಟಿದವರು ಸೋನೂಬಾಯಿ.

ಮುಂದೆ "ಸುರೇಲಿ" ಕಂಠದ ಸೋನೂಬಾಯಿ ಐದು ವರ್ಷಗಳಾಗುವವರೆಗೆ ಬೆಳೆದದ್ದು (ಜನನ 1920) ದೊಡ್ಡವ್ವ ಬಚ್ಚಾಸಾನಿ ಅವರ ಮಮತೆಯಡಿಯಲ್ಲಿ. ಈ ಬಂಗಾರದಂತಹ ಹುಡುಗಿಯನ್ನು ಅವರು ಆಗಾಗ ತಮ್ಮ ನಾಟಕಗಳಲ್ಲಿ ಪಾತ್ರವಹಿಸುವಂತೆ ಮಾಡುತ್ತಿದ್ದರು. ವಯೋಮಾನಕ್ಕನುಗುಣವಾಗಿ ಪೀರವ್ವನ ಈ ದೊಡ್ಡಕ್ಕ ನಾಟಕ ಕಂಪನಿಯನ್ನು ಮುಚ್ಚುವ ನಿರ್ಧಾರ ಮಾಡಿದಾಗ ಹಾವೇರಿಗೆ ಬಂದು ನೆಲೆಸಿದ್ದು ಸೋನೂಬಾಯಿಗಾದ ದೊಡ್ಡ ನಷ್ಟ.

ಆ ಕ್ಷಣಕ್ಕೆ ಅವರಕ್ಕೆ ಮಲಕವ್ವ ಅವರ ನೆರವಿಗೆ ಬಂದರು. ಗುರುವಾದರು. ಇದೇ ಹೊತ್ತಿಗೆ ಅಬ್ಬಿಗೇರಿ ಕಂಪನಿ ಹುಬ್ಬ

ಳಿಗೆ ಬಂತು. ಹಾವೇರಿಯಲ್ಲಿ ಸೋನೂಬಾಯಿಯವರ ಹಾಡು ಕೇಳಿದ ಕಂಪನಿಮಾಲೀಕರಾದ ಬಸವನ ಗೌಡರು ಇವರನ್ನು ತಮ್ಮ ಕಂಪನಿಗೆ ಸೇರಿಸಿಕೊಂಡರು. ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಝಾನ್ಸಿ [illegible] ದೇಶಭಕ್ತಿ [illegible] ಸುವ ನಾಟಕಗಳನ್ನಾಡುತ್ತಿದ್ದ ಈ ಕಂಪನಿ ಗಾಂಧೀಜಿಯವರ ಅಸಹಕಾರ ಚಳುವಳಿಯನ್ನು ಪ್ರಚೋದಿಸಿಯಾವೆಂಬ ಕಾರಣ ದಿಂದ ಬ್ರಿಟೀಶ್ ಸರ್ಕಾರ ಈ ಕಂಪನಿಯ ಲೈಸೆನ್ಸ್ ರದ್ದು ಮಾಡಿತು. [illegible] ಮುಚ್ಚಿತು. [illegible]

[illegible] ಹಾಗೂ ದೇಶ್ ಪಾಂಡೆ ಗುಳೇದಗುಡ್ಡಯವರ ಮಾರ್ಗದರ್ಶನದಲ್ಲಿ ಸೋನೂಬಾಯಿಯವರ ಸಂಗೀತ ಮುಂದುವರೆದೇ ಇತ್ತು. ಅಲ್ಲಿರಿದ್ದ [illegible] ಪ್ರಸಾದಿಕ ನಾಟಕ ಮಂಡಳಿಯತ್ತ ಇವರ ಜಿಗಿತ. ಈ ಕಂಪನಿಯಲ್ಲಿ 'ಶ್ರೀಕೃಷ್ಣ [illegible]', 'ರಾಮಾಯಣ' [illegible] ನಾಟಕಗಳಲ್ಲಿ ವಿವಿಧ ಪಾತ್ರ [illegible] ಹಾಡುಗಾರಿಕೆಗಳಿಂದ [illegible] ರೊಕ್ಕದ [illegible] ಪ್ರಾರಿದ್ದರು. [illegible]

ಹೋದಲ್ಲೆಲ್ಲಾ ಕಂಪನಿ ಜಯಭೇರಿ ಬಾರಿಸಿತು. ಆದರೆ [illegible] ಪಕ್ಕಾದ ವೆಂಕಟರಾಯರು ತಮ್ಮ ಊರು ಸುರೇಬಾನಕ್ಕೆ ಹೋದಾಗ ಕಂಪನಿ ಮುಚ್ಚಬೇಕಾದ [illegible] ಜೀವದಾನ ಮಾಡಿದವರು ಶ್ರೀನಿವಾಸ್ ರಾವ್ ಕಲಕೋಟಿ. ಆದರೂ ವೆಂಕಟರಾಯರ ನಿರ್ಗಮನದಿಂದ ಸೋನೂಬಾಯಿ ಧ್ವನಿ ಕಳೆದುಕೊಂಡವರಂತಾಗಿದ್ದರು. ಕಂಪನಿ ನಿಧಾನವಾಗಿ ಸೊರಗ ತೊಡಗಿತು, ಈ ನಡುವೆ ಸೋನೂಬಾಯಿ ಗರ್ಭಿಣಿ ಆದುದರಿಂದ ಕಂಪನಿ ಮುಚ್ಚುವುದು ಅನಿವಾರ್ಯವಾಯಿತು. ಆಭರಣಗಳನ್ನು ತೊಟ್ಟು ವೈಭವದಿಂದ ಮೆರೆದ ಕಲಾವಿದೆ ಈಗ ಸಾದಾ ನೂಲಿನ ಸೀರೆ ಒಂದೆಳೆ ತಾಳಿ ಗಾಜಿನ ಬಳೆಗಳಷ್ಟೇ ಧರಿಸುವಂತಾಯ್ತು.

ಮತ್ತೆ ಅತಿಥಿ ಕಲಾವಿದೆಯಾಗಿ ಸೋನೂಬಾಯಿ ಹತ್ತಾರು ಕಂಪನಿಗಳಿಗೆ ಜೀವದಾನ ಮಾಡಿದರು. ಟಿ. ಪಿ. ಕೈಲಾಸಂ ಅವರು ಸೋನೂಬಾಯಿ 'ವಿರಾಟ ಪರ್ವದ' ದ ಸುದೇಷ್ಣಾ ಪಾತ್ರದಲ್ಲಿ ಹಾಡಿದುದನ್ನು ಕೇಳಿ 'ಒನ್ ಮೋರ್' ಎಂದರಂತೆ.

ಕರ್ನಾಟಕದ ಮೊಟ್ಟ ಮೊದಲ ಸ್ತ್ರೀ ನಾಟಕ ಮಂಡಳಿಯನ್ನು ನಡೆಸಿದವರು ತಿರುಳ್ಳನಡದ ಪುಲಿಗೆರೆ — ಲಕ್ಷ್ಮೇಶ್ವರ ದೇವಾಲಯದ ಲಕ್ಷ್ಮಣ ಲಿಂಗ ದೇವಸ್ಥಾನಕ್ಕೆ 'ನರ್ತನ ಗಾಯನ ಸೇವೆ' ಸಲ್ಲಿಸುತ್ತಿದ್ದ ಬಚ್ಚಾ ಸಾನಿ. ಇವರು ಆಗಿನ ಕಾಲದ ಸುಪ್ರಸಿದ್ಧ ಸಂಗೀತ ಕಲಾವಿದೆ. ನಾಟಕದಲ್ಲಿ ಆಕೆಯದು ದೊಡ್ಡ ಹೆಸರು. ಆಕೆ ರಾಜಪುರುಷನ ಪಾತ್ರದಲ್ಲಿ ಕಾಣಿಸಿಕೊಂಡರೆ ನೋಡಿದವರು ಆಕೆ ಹೆಣ್ಣೆಂದು ಪ್ರಮಾಣ ಮಾಡಿ ಹೇಳಬೇಕು. ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಬಚ್ಚಾ ಸಾನಿ ರಂಗಭೂಮಿಯ ರಾಣಿಯಾಗಿ ಮೆರೆದವರು. ಗ್ವಾಲಿಯರ್ ಘರಾಣೆಯ ಸುಪ್ರಸಿದ್ಧ ಕಲಾವಿದ ಗಾಯಕ ಮೀರಜ್‌ನ ಕೇಶವ ಬುವಾರ ಶಿಷ್ಯೆಯಾಗಿ ಸಂಗೀತ ಅಭ್ಯಾಸ ನಡೆಸಿ ಪರಿಣತಿ ಪಡೆದವರು ಇವರು. [illegible] ವರ್ಷವಾದಾಗ ಒಮ್ಮೆ ಅವರು ಪ. ಮಲ್ಲಿಕಾರ್ಜುನ ಮನ್ಸೂರರೆದುರು ಹಾಡಿದರಂತೆ. ಕಂಚಿನ ಕಂಠದಲ್ಲಿ ಮಾಲ್‌ಕೌನ್ಸ್ ರಾಗ ಕೇಳಿದ ಮನ್ಸೂರ್ ಅವಾಕ್ಕಾದರಂತೆ.

ಬಚ್ಚಾ ಸಾನಿಯ ನಾಟಕ ಮಂಡಲಿಯಲ್ಲಿ ಎಲ್ಲ ಕೆಲಸ [illegible] ಗಳನ್ನು ಸ್ತ್ರೀಯರಿಂದಲೇ ನಿರ್ವಹಿಸಲಾಡುತ್ತಿದ್ದವು. ಅವರೆಲ್ಲ ಬಚ್ಚಾ ಸಾನಿಯ ಕರುಳಬಳ್ಳಿಯವರು. ಆಕೆಯೂ ಸೇರಿದಂತೆ ಅವರು ಒಟ್ಟು ೭ ಮಂದಿ ಸೋದರಿಯರು. ಅದೊಂದು ದೊಡ್ಡ ಮನೆತನ. ಅದೇ 'ದೊಡ್ಡಮನಿ' ಎಂದು ಅವರ ಮನೆತನದ ಹೆಸರಾಯಿತು. ಬಚ್ಚಾ ಸಾನಿಯ ಸೋದರಿಯರಿಗೂ ಸಂಗೀತದಲ್ಲಿ ಸಾಕಷ್ಟು ಪರಿಣತಿ. ಆ ಮಂಡಳಿಯ ನಾಟಕಗಳೆಂದರೆ ಸಂಗೀತ ಕಛೇರಿಗಳೇ. ಜನ ಸಂಗೀತ ಕಛೇರಿಗಳಿಗೆ ಮುಗಿಬೀಳುತ್ತಿದ್ದರು.

ಸೋನೂಬಾಯಿ ಅವರಿಗೆ ಇಂಗದದಾಹ ಸಂಗೀತದ್ದು. ಅಬ್ಬಿಗೇರಿ ಕಂಪನಿಯಲ್ಲಿ ರಾಮದುರ್ಗದ ವೆಂಕಟರಾಯರು ಇವರನ್ನು ಶಿಷ್ಯೆಯಾಗಿ ಸ್ವೀಕರಿಸಿದರು. ಅವರು ಶಿಷ್ಯೆಯ ಬೆಳವಣಿಗೆಗಾಗಿ ಹಗಲಿರುಳೂ ಶ್ರಮಿಸಿದರು. ರಾಗಪರಿಚಯ, ರಾಗ ವಿಸ್ತಾರ ಸ್ವರಸಂಯೋಜನೆಗಳನ್ನು ಇಲ್ಲಿ ಸೋನುಬಾಯಿ ಆಳವಾಗಿ ಅಭ್ಯಾಸಿಸಿದರು.

ಗುರುವಿನೊಂದಿಗೆ 1936 — 37ರ ಹೊತ್ತಿಗೆ ಸೋನುಬಾಯಿ ನೂತನಸಂಗೀತ ನಾಟಕಮಂಡಳಿ' ಯನ್ನು ಆರಂಭಿಸಿದರು. 'ಸೋನುಬಾಯಿ ಅವರ ಯಾಜಮಾನರಾದ [illegible] ವೈದ್ಯರು ಕಂಪನಿ' ಪ್ರಾರಂಭಿಸಲು ಒಪ್ಪಿದ್ದು [illegible] [illegible] ಸೋನುಬಾಯಿ [illegible]

[illegible] ಸೋನೂಬಾಯಿ [illegible] ಲಕ್ಷ್ಯ [illegible] ಬಂದಿದ್ದಾರೆ. [illegible] ಮೈಸೂರು [illegible] ಕನ್ನಡ [illegible] ಕಾರ್ಯಕ್ರಮ ನೀಡಿದ್ದಾರೆ. [illegible] ದಿಂದ ಸಂಗೀತದ ಸೋನೆಯನ್ನು ಕರೆಯುತ್ತಲೇ ಬಂದಿದ್ದಾರವರು.

19:0ರಲ್ಲಿ ಅಸ್ಸಾಂ ಪರಿಹಾರ ನಿಧಿಗಾಗಿ ಸರ್ಕಾರ ಏರ್ಪಡಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಹಾಡಿ [illegible] ರೂಪಾಯಿ [illegible] ಸೋನೂಬಾಯಿ [illegible] ಸೋನೂಬಾಯಿ ಈಗ ತಮ್ಮ ಬದುಕಿನ [illegible] ಕಳೆಯುತ್ತಿದ್ದಾರೆ. [illegible]

ಓದುಗರ ವಿಭಾಗ

ತೆಲಂಗಾಣ ಮಹಿಳೆಯರ ಹೋರಾಟ ನಮಗರಿಯದ ನಮ್ಮ ಚರಿತ್ರೆ, ಲೇಖನವನ್ನು ಓದಿದಾಗ ನಮ್ಮ ಮುಂದೆ ಹಲವು ವಿಚಾರಗಳು, ಭಾವನೆಗಳು, ವಿಷಾದ, ಖಿನ್ನತೆಗಳು ಜೊತೆಯಾಗಿ ಮೂಡುತ್ತವೆ.

ರೈತಾಂಗ ಹೋರಾಟದಲ್ಲಿ ತಮ್ಮನ್ನು ಅರ್ಪಿಸಿಕೊಂಡು ಗಂಡಿನಷ್ಟೇ ಪರಿಶ್ರಮದಿಂದ ಹೋರಾಡಿದ ಮಹಿಳೆಯರ ಅಪ್ರತಿಮ ಸಾಹಸ [illegible] ಜೊತೆ ಜೊತೆಗೆ [illegible] ಗಳು [illegible] ಮಹಿಳೆಯರು ಅನುಭವಿಸಬೇಕಾಗಿ ಬಂದ ವಾಸ್ತವಿಕತೆಯತ್ತ ಬೆರಳು ಚಾಚುತ್ತವೆ.

ಗೆರಿಲ್ಲಾ ದಾಳಿಗಳಲ್ಲಿ ನಾಯಕತ್ವ ವಹಿಸಿ, ಗಂಡು ಉಡುಗೆ ಧರಿಸಿ ವೇಷ ಮರೆಸಿ ಹೋರಾಡಿದ ಅಸಾಮಾನ್ಯ ಘಟನೆಗಳು ರೋಮಾಂಚಕಾರಿಯಾಗಿವೆ, ಆದಾಗ್ಯೂ ಚಳುವಳಿಗೆ ಮಹಿಳೆಯರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಕಮ್ಯೂನಿಸ್ಟ್ ಪಾರ್ಟಿಗಿದ್ದ ಸಂದಿಗ್ಧತೆ, ಲೈಂಗಿಕ ಸಮಸ್ಯೆಗಳು, ಮಹಿಳೆಯರ ಶೀಲದ ಬಗ್ಗೆ ಹೊಂದಿದ್ದ [illegible] ಗಳು ಇವುಗಳೆಲ್ಲ ಪುರುಷ ಪ್ರಧಾನ [illegible] ಕಮ್ಯೂನಿಸ್ಟ್ ಪಾರ್ಟಿ [illegible] [illegible] ಕಾದ [illegible] ಇದ್ದ [illegible] ತನ್ನ [illegible] ಮಗುವನ್ನೇ ಯಾರಿಗೋ ಕೊಟ್ಟು [illegible] [illegible] ಹವರನ್ನು [illegible] [illegible] ತನ್ನ [illegible] ವನ್ನೇ ಕಳೆದುಕೊಂಡು ಹೋರಾಡಿದ ಆಕೆಗೆ ದೊರೆತ ಪ್ರತಿಫಲವೇನು [illegible] ಹೆಣ್ಣು ನೀನು ಏನು ಬದುಕು ಒಂದು ಚರಿತ್ರೆಯಾಗಿ ಗುತ್ತದೆ ಎಂದವರು ನಂತರ ನೀವು ಯಾರೆಂದು ವಿಚಾರಿಸಲ್ಲೇ ಇಲ್ಲ ಎನ್ನುವ [illegible] ಧ್ವನಿಯಲ್ಲಿ [illegible] ಹತಾಶೆ ಅಡಗಿದೆ!

ಹೋರಾಟದ ನಂತರ [illegible] "ನೀವೆಲ್ಲ ನಿಮ್ಮ ನಿಮ್ಮ ಕುಟುಂಬಗಳಿಗೆ ಹಿಂದಿರುಗಿ" [illegible] ತುಪಾಕಿ ಹೆಗಲಿಗೇರಿಸಿ ಹೋರಾಡಿದವರಿಗೆ ಹೊಲಿಗೆ ಯಂತ್ರಗಳ ಮುಂದೆ ಕೂತು ಬಟ್ಟೆ ಹೊಲಿಯುವ ಪರಿಸ್ಥಿತಿಯಾಯಿತು. ಪಕ್ಷಕ್ಕೆ ಸ್ತ್ರೀಯರ ಸಮಸ್ಯೆಗಳು, ಅವರ ಮುಂದಿನ ಬದುಕು ಸಮಸ್ಯೆಯಾಗಿರಲೇ ಇಲ್ಲ. ತೆಲಂಗಾಣದ ಚರಿತ್ರೆಯನ್ನು ಬರೆದವರೂ ಕೂಡ ಈ ಮಹಿಳೆಯರಿಗೆ ಯಾವುದೇ ಚಾರಿತ್ರಿಕ ಸ್ಥಾನ [illegible] ಈ [illegible] ಚರಿತ್ರೆ [illegible] ಹೋದ ಸ್ತ್ರೀಯರಿಗೆ "ಮನಕು ತೆಲಿಯನಿ ಮನ ಚರಿತ್ರ" ಅರ್ಪಿಸಿರುವುದು ಅರ್ಥಪೂರ್ಣವಾಗಿದೆ. [illegible] ವೀರ ರಾಣಿಯರ ಚರಿತ್ರೆಯನ್ನು [illegible] ನಾವು, ಪುಣ್ಯ ಸ್ಮರಣೆಯಲ್ಲಿಯೇ ಬದುಕಿ, ದರ್ಬಾರ [illegible] ಸಾಹಸ ತೋರಿದ ಈ ಮಣ್ಣಿನ ಮಹಿಳೆಯರ ಚರಿತ್ರೆಯನ್ನು ಇದುವರೆಗೂ ಕತ್ತಲಲ್ಲಿ ಇಟ್ಟಿದ್ದು ವಿಷಾದನೀಯ ವಿಷಯ.

ಪ್ರೇಮಾವತಿ [illegible]

ಹೆಣ್ಣು ವರ್ಗದ ಇತಿಹಾಸ ಭೂಮಿಕೆಯಲ್ಲಿ ಮಾನಸಿಕ ಚಡಪಡಿಕೆಗಳಲ್ಲಿ ಒಂದು ತೆಳುವಾದ ದೃಢತೆ ಸ್ವಲ್ಪವಾದರೂ ಸಫಲತೆಯ ತುಂಬು ಮೋಡಗಳು ಹಾದು ಹೋಗಿವೆ ಎನ್ನುವುದು [illegible] ಪುರಸ್ಕರಿಸಿ ಛಾಪಿಸಿಕೊಟ್ಟಿರುವುದು ಆದಷ್ಟೇ [illegible] ಚೇತರಿಕೆ ಕೊಡುವಂತ (ಹೆಣ್ಣಿನ ಪ್ರಗತಿ ಪ್ರಜ್ಞೆಗೆ) ಸಂಗತಿ [illegible] ತೆಲಂಗಾಣ ರೈತಾಂಗ ಹೋರಾಟದಲ್ಲಿ [illegible] "ನಮಗರಿಯದ [illegible] "ಮನ" ಚರಿತ್ರ [illegible] ಭಗ ಭಗಿಸುವ ಕೆಂಡದುಂಡೆಯನ್ನು ಆ ದಾರಿಯಲ್ಲೇ ಹಾಸುತ್ತ, ಛಲ, [illegible] ತೆಲಂಗಾಣದ [illegible] ಹಿಂಗಿಸದ, ಯಾವುದೇ ಸಿದ್ಧಾಂತ ಮಾದರಿಗಳನ್ನು ಮೀರಿ ಪರಿಣಾಮಗಳನ್ನು [illegible] "ಮಾನಸ" ವಿಶೇಷಾಂಕದಲ್ಲಿ ಈ ಪುಸ್ತಕ ಕುರಿತ ಲಕ್ಷ್ಮಿಪತಿ, ಕೋಲಾರ ಗವರ ವಿಶ್ಲೇಷಣೆಯಲ್ಲಿ, "ತೆಲಂಗಾಣದಲ್ಲಿ ಹೆಣ್ಣೊಂದರ .... ಕಳ್ಳುವುದನ್ನು ಪ್ರಶ್ನಾತೀತ ಪದ್ಧತಿಯಾಗಿ ಹೋಗಿತ್ತು" [illegible] ಭುಗಿಲೆನುವ ಸಂತಾಪ ಈ ಹೆಣ್ಣು ಚರಿತ್ರೆಯಿಂದ, ಕರುಳನ್ನು ರಾಚುತ್ತದೆ. ಅಬ್ಬಾ! ಇಂಥಾ ಪರಿಣಾಮಕಾರಿ [illegible] "ಮಾನಸ" [illegible]

ಅಕ್ಕ–ಪಕ್ಕ

ಮಹಿಳೆಯರಿಗೆ ಸ್ಥಾನ ಮೀಸಲಿಡುವಿಕೆಯನ್ನು, ಪುರುಷ ರಾಜಕಾರಣಿಗಳು ವಿರೋಧಿಸುವುದಿಲ್ಲ. ಏಕೆಂದರೆ ಅವರಿಗೆ ಗೊತ್ತು ಈ ಸ್ಥಾನಗಳು ತಮ್ಮ ಸಂಬಂಧಿಗಳಿಗೇ ಸಿಗುತ್ತದೆಂದು ಈ ಪರಿಗಣನೆಗಳೇ ಮೀರಾ ಕುಮಾರ್ (ಜಗಜೀವನರಾಂ ಪುತ್ರಿ). ಶೀಲಾ ದೀಕ್ಷಿತ್ (ಉಮಾಶಂಕರ್ ದೀಕ್ಷಿತ್ ಸೊಸೆ) ಹಾಗೂ ಶೀಲಾ ಕೌಲ್ (ರಾಜೀವ್ ಸೋದರ ಸಂಬಂಧಿ) ಆಯ್ಕೆಯನ್ನು ನಿರ್ಧರಿಸಿದೆ.

ಮಧು ಕಿಶ್ವರ್
ಇಲ್ಲಸ್ಟ್ರೇಟೆಡ್ ವೀಕ್ಲಿ ಲೇಖನದಲ್ಲಿ

ಸರ್ವಕಾಲಕ್ಕೂ ಶ್ರೇಷ್ಠ ಆಟಗಾರಳಾಗಿರಬೇಕೆಂಬುದು ನನ್ನ ಗುರಿಯಾಗಿತ್ತು...... ಅದು ಸ್ವಲ್ಪ ಅತಿಯಾದ ಸ್ವಪ್ರತಿಷ್ಠೆ

ಮಾರ್ಟಿನಾ ನವ್ರಾಟಿಲೋವಾ
ಅಮೇರಿಕದ ಟೆನ್ನಿಸ್ ಆಟಗಾರ್ತಿ
(ನ್ಯೂಯಾರ್ಕ್ ಟೈಮ್ಸ್)

ನನ್ನ ಸ್ವಸಾಮರ್ಥ್ಯ ಹಾಗೂ ಅರ್ಹತೆಯಿಂದ ಚುನಾವಣೆಗೆ ಸ್ಪರ್ಧಿಸಿದ್ದೇನೆಯೇ ವಿನಃ ಯಾರದೋ ಹೆಂಡತಿಯಾಗಿ, ತಂಗಿಯಾಗಿ, ಮಗಳಾಗಿ ಅಲ್ಲ.

ಸುಭಾಷಿನಿ.
(ಸಿ. ಪಿ. ಎಂ. ಅಭ್ಯರ್ಥಿ" ಹಾಗೂ ಖ್ಯಾತ ನಿರ್ದೇಶಕ ಮುಜಾಫರ್ ಆಲಿಖಾನ್ ಹೆಂಡತಿ ಹಾಗೂ ನೇತಾಜಿಯವರ ನ್ಯಾಷನಲ್ ಆರ್ಮಿಯಲ್ಲಿ ಕ್ಯಾಪ್ಟನ್ ಆಗಿದ್ದ ಲಕ್ಷ್ಮಿಯವರ ಮಗಳು).

ಪ್ರಾಮಾಣಿಕತೆ ಎನ್ನುವುದು ನನ್ನ ಬದುಕಿನ ವಿಧಾನ. ಏನೇ ಕೆಲಸ ಮಾಡಿದರೂ ಅದಕ್ಕೆ ಪ್ರಾಮಾಣಿಕಳಾಗಿರುತ್ತೇನೆ.

ರೂಪ ಗಂಗೂಲಿ.
(ಟಿ. ವಿ. ಮಹಾಭಾರತದ ದ್ರೌಪದಿ) ಸ್ತ್ರೀ ಪತ್ರಿಕೆ ಸಂದರ್ಶನದಲ್ಲಿ)

ಸ್ಮಿತಾಳ ಜೀವನ ಹಾಗೂ ವೃತ್ತಿ ಅಪೂರ್ಣತೆಯ ಸಂಕೇತ, ಸ್ಮಿತಾ ಶಬಾನಾ ಆಜ್ಮಿಯ ಹಾಗೆ ಲೆಕ್ಕಾಚಾರದ ನಟಿಯಲ್ಲ.

ಸುಭಾಷ್ ಕೆ. ಜಾ.
(ಸ್ಮಿತಾ ಪಾಟೀಲಳ ಸ್ಮರಣೆಯ ಹಿನ್ನೆಲೆಯಲ್ಲಿ)

ನನ್ನ ಗಂಡ ವಿ. ಪಿ. ಸಿಂಗ್ ಪೂನಾದ ಫರ್ಗೂಸನ್ ಕಾಲೇಜಿನಲ್ಲಿ ವಿಜ್ಞಾನವನ್ನು ಕಲಿಯುವುದರಲ್ಲಿ ಮುಳುಗಿರುತ್ತಿದ್ದರು. (ಪೂನಾದ ಸ್ನೇಹಿತರ ಕುಟುಂಬದ ಜೊತೆ ಕಳೆದ ಸಮಯವನ್ನು ನೆನೆಸುತ್ತಾ) ನಾವು ಹೆಂಗಸರು ಮನೆಗೆಲಸ, ಮಕ್ಕಳನ್ನು ನೋಡಿಕೊಳ್ಳುವುದು, ಸಾಯಂಕಾಲ ಸಿನಿಮಾ ನೋಡುವುದು ಮುಂತಾದವುಗಳಲ್ಲಿ ಸಮಯ ಕಳೆಯುತ್ತಿದ್ದೆವು.

ಸೀತಾ ಕುಮಾರಿ
(ಪ್ರಧಾನಿ ವಿ. ಪಿ. ಸಿಂಗ್ ಅವರ ಹೆಂಡತಿ.)

ದೇಶದ ಒಟ್ಟು ಮತದಾರರಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಸಂಸತ್ತು ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ಅತ್ಯಲ್ಪ. ಇತ್ತೀಚಿನ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಮಹಿಳೆಯರಿಗೆ ನೀಡಿರುವ ಪ್ರಾತಿನಿಧ್ಯ ಪ್ರಣಾಳಿಕೆಗಳಲ್ಲಿ ಮಹಿಳಾ ಕಲ್ಯಾಣ ಕುರಿತು ಅವು ತೋರಿಸಿರುವ ಕಾಳಜಿ ಭಾರತೀಯ ಮಹಿಳೆಯ ಸ್ಥಾನದ ಅಗಣ್ಯತೆ ಎಷ್ಟೆಂಬುದನ್ನು ತೋರಿಸುತ್ತದೆ.

ಪ್ರಜಾವಾಣಿ ಸಂಪಾದಕೀಯದಿಂದ

ಎರಡನ್ನು ಪ್ರಶ್ನಿಸಿ ಮಾನನಷ್ಟ ಮೊಕದ್ದಮೆ ಹೂಡಿದ್ದೆ. ಒಂದು ಕೇಸನ್ನು ಜಯಿಸಿದ್ದೇನೆ. ನನಗೆ ಸಂತೋಷವಾಗಿದೆ. ಈ ಜಯ ಮಹಿಳೆಯರ ಶೋಷಣೆಯ ವಿರುದ್ಧವಾದ ಪ್ರತಿಭಟನೆಯ ಜಯ ಎಂದು ತಿಳಿದುಕೊಂಡಿದ್ದೇನೆ.

ಸಾರಾ ಅಬೂಬಕರ್
ಸಂದರ್ಶನವೊಂದರಲ್ಲಿ (ತಮ್ಮ ಬರಹಗಳಿರದರ ಬಗ್ಗೆ ಎದುರಾದ ಕಟುಟೀಕೆಗಳ ಬಗ್ಗೆ)

ಮಹಿಳೆಯರು ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಗಮನಾರ್ಹ ಪ್ರಗತಿ ಸಾಧಿಸಿದ್ದಾರೆ. ಚಟುವಟಿಕೆಗಳಿಗೆ ಉತ್ತೇಜನ ನೀಡುವ ಕಾರ್ಯ ಇನ್ನೂ ಹೆಚ್ಚಾಗಬೇಕಾಗಿದೆ.

ಆರ್. ನಾಗರತ್ನಮ್ಮ (ಕಲಾವಿದೆ)

ಲೇಖಕಿಯೊಬ್ಬಳ ಬದುಕು ಬೇರೆಲ್ಲರದಕ್ಕಿಂತ ಭಿನ್ನವಾಗಿರಲು ಸಾಧ್ಯ. ಅವಳಿಗೆ ತನ್ನದೇ ಆದ ಆಲೋಚನೆಗಳು ಮತ್ತು ಅಭಿವ್ಯಕ್ತಿಸುವ ಶಕ್ತಿ ಇರುವುದು ಇವಕ್ಕೆ ಕಾರಣ.

ಅನುಪಮಾ ನಿರಂಜನ (ಖ್ಯಾತಲೇಖಕಿ)

ಹೆಣ್ಣು ಮತ್ತು ಗಂಡು ಮಕ್ಕಳ ನಡುವೆ ತಾರತಮ್ಯವಿಲ್ಲದ ಸಮಾನ ದೃಷ್ಟಿ ಬೆಳೆಯಬೇಕೆಂಬ ಸಂಕಲ್ಪ ಇದರ ಹಿಂದಿದೆ (1990 ನ್ನು ಹೆಣ್ಣು ಶಿಶುವಿನ ವರ್ಷವೆಂದು ಘೋಷಿಸಲು ಸರ್ಕಾರ ನಿರ್ಧರಿಸಿರುವುದನ್ನು ಕುರಿತು) ಸಮಾಜ ದೃಷ್ಟಿಯ ಪರಿವರ್ತನೆಗೆ ಈ ವರ್ಷ ನಾಂದಿ ಹಾಡಬಹುದಾಗಿದೆ. ಭ್ರೂಣಾವಸ್ಥೆಯಲ್ಲೇ ಲಿಂಗ ನಿರ್ಣಯ ಮಾಡಿ ಹೆಣ್ಣಾಗುವ ಸಾಧ್ಯತೆಗಳನ್ನು ದೂರ ಮಾಡುವ ವೈದ್ಯ ಪರಿಕ್ಷೆಗಳಿಗೆ ಈ ವರ್ಷ ನಿರ್ಬಂಧ ಒಡ್ಡಲು ನಮ್ಮ ಆಡಳಿತಗಾರರು ಕಾನೂನನ್ನು ತರಬೇಕಾದ ಅವಶ್ಯಕತೆ ಇದೆ.

ಪ್ರಜಾವಾಣಿ ಸಂಪಾದಕೀಯದಿಂದ

ಓದುಗರಲ್ಲಿ ಮನವಿ

ಶತಮಾನಗಳಿಂದ ತುಳಿತಕ್ಕೊಳಗಾದ ಸ್ತ್ರೀಯರ ಧ್ವನಿಯಾದ ಮಾನಸ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಬೇಕೆಂಬ ಮಹತ್ವಾಕಾಂಕ್ಷೆಯಿದ ಪ್ರಾರಂಭಿಸಿದರೂ, ಆರ್ಥಿಕ ಕಾರಣಗಳಿಂದಾಗಿ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಲು ಸಾಧ್ಯವಾಗದೆ ಇರುವುದನ್ನು ನೀವು ಈಗಾಗಲೇ ಗಮನಿಸಿರಬಹುದು.

ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನವನ್ನೂ ಮೀರಿ ಅಡಿಗಡಿಗೆ ಎದುರಾಗುವ ಸಮಸ್ಯೆಯಿಂದಾಗಿ ಪತ್ರಿಕೆ ತುಂಬಾ ವಿಳಂಬ ಗತಿಯಲ್ಲಿ ಪ್ರಕಟವಾಗುತ್ತಿದೆ. ಪತ್ರಿಕೆಯ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದು ಪುಟ್ಟದಾದ ಅಚ್ಚುಮೊಳೆಯ ಕೇಂದ್ರವನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ಇದರ ಖರ್ಚು ವೆಚ್ಚಗಳೊಂದಿಗೆ ಬಾಡಿಗೆಗೆ ಹಣ ಹೊಂದಿಸುವುದು ದುಸ್ತರವಾಗುತ್ತಿದೆ. ಈ ಹಂತದಲ್ಲಿ ಪತ್ರಿಕೆಯ ಆತ್ಮೀಯ ಹಿತೈಷಿಗಳಾದ ನಿಮಗೆ ಈ ಕೆಳಗಿನ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇವೆ. ಪ್ರತಿ ತಿಂಗಳೂ ಮಾನಸ ಆಫೀಸ್ ಬಾಡಿಗೆಗೆಂದು ರೂ. 5-00 ಕಳಿಸಲು ಸಾಧ್ಯವೆ? ಪ್ರತಿ ತಿಂಗಳೂ ಕಳಿಸುವುದು ಸಮಸ್ಯೆಯೆನಿಸಿದರೆ, ಅರ್ಧ ವರ್ಷದ ಅಂದರೆ ರೂ. 30-00 ಅಥವಾ ಒಂದು ವರ್ಷದ ರೂ. 60-00 ಒಟ್ಟಿಗೆ ಕಳಿಸಬಹುದು. ನಮ್ಮ ಈ ಕಿರು ಪ್ರಯತ್ನಕ್ಕೆ ನಿಮ್ಮ ಬೆಂಬಲ ಮತ್ತು ಪ್ರೋತ್ಸಾಹವಿದೆಯೆಂಬ ಭರವಸೆ ನಮಗಿದೆ.

'ಮಾನಸ' ದೊಡನೆ ನಿಮ್ಮ ಪತ್ರ ವ್ಯವಹಾರದಲ್ಲಿ ಪ್ರತಿ ಬಾರಿಯೂ ನಿಮ್ಮ ವಿಳಾಸವನು ಬರೆಯಿರಿ. ಅನಾವಶ್ಯಕವಾಗಿ ಗೊಂದಲ ಕಡಿಮೆ ಆಗುವುದಲ್ಲದೇ, ತಕ್ಷಣ ಪತ್ರಿಸಲು ನಮಗೂ ಸಹಾಯಕವಾಗುತ್ತದೆ. ಜೊತೆಗೆ ವಿಳಾಸದಲ್ಲಿನ ಬದಲಾವಣೆಗಳು ಗಮನಕ್ಕೆ ಬರುತ್ತವೆ.

ಚಂದಾದಾರರಾಗಿ

ನಿಮ್ಮ ಪ್ರೋತ್ಸಾಹ ಮತ್ತು ಸಹಕಾರಗಳಿಂದಲೇ 'ಮಾನಸ' ವನ್ನು ಪ್ರತಿತಿಂಗಳು ಕ್ರಮಬದ್ಧವಾಗಿ ಪ್ರಕಟಿಸಲು ಸಾಧ್ಯ. ನಿಮ್ಮ ಗೆಳೆಯ, ಗೆಳತಿಯರಿಗೆ ಪತ್ರಿಕೆಯನ್ನು ಪರಿಚಯಿಸಿ ಚಂದಾದಾರರನ್ನಾಗಿಸಿ. ಆಜೀವ ಚಂದಾದಾರರಾಗಿ (250 ರೂ) ಪತ್ರಿಕೆಯ ಸ್ವಾವಲಂಬನೆಗೆ ಸಹಾಯಕರಾಗಿ.

ಗ್ರ್ಯಾಫಿಕ್ಸ್

ನೀವು ಮಾನಸ ತಿಂಗಳ ಪತ್ರಿಕೆಯ ಮುಖಪುಟ ಹಾಗೂ ಒಳಗಿನ ಪುಟಗಳ ಗ್ರ್ಯಾಫಿಕ್ಸ್ ಗಮನಿಸಿರಬಹುದು. ಪ್ರತಿ ಸಂಚಿಕೆಯಲ್ಲೂ ಹೀಗೆ ಪ್ರತಿ ಲೇಖನಕ್ಕೆ ಹಾಗೂ ಅಂಕಣಗಳಿಗೆ ಸಂಬಂಧಿಸಿದಂತೆ ಚಿತ್ರಗಳನ್ನು ಪ್ರಕಟಿಸಲಾಗುವುದು. ನೀವು ಕಲಾವಿದರಾಗಿದ್ದರೆ ನಿಮ್ಮ ರಚನೆಗಳನ್ನು 'ಮಾನಸ' ಪ್ರಕಟಣೆಗೆ ಕೊಡಿ.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ, ಪಂಚಾಯಿತಿ ರಸ್ತೆ ಕಾಡುಗೋಡಿ ಅಂಚೆ ಬೆಂಗಳೂರು ೫೬೦೦೬೭

ನಂ ಮ್ಯಾಗ್ (5) ಪಿಆರ್‌ಬಿ ಡಿಕ್ಲೇರ್ಡ್ : 284/8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : " ಮಾನಸ "
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು – 560067

ಸೂಚನೆ:
ಬಿಡಿಪ್ರತಿ: 2 ರೂ.
ವಾರ್ಷಿಕ ಚಂದಾ : 20 ರೂ.
ಆಜೀವ ಚಂದಾ : 250ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ. ಮೂಲಕ ಸ್ವೀಕರಿಸಲಾಗುವುದು.